ಸಂಪಾದಕರು :
ಎಂ.ಎಸ್. ವಿಕಾಸ್

ಶನಿವಾರ, ಡಿಸೆಂಬರ್ 09, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 207 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
☎ 08192 254736 91642 99999



## ಉನ್ನತ ವ್ಯಾಸಂಗ ಪಡೆದು, ಉತ್ತಮ ಪ್ರಜೆಗಳಾಗಿರಿ

**ಮಕ್ಕಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಪಂಚಾಯ್ತಿ ಯೋಜನಾಧಿಕಾರಿ ಮಲ್ಲಾನಾಯ್ಕ್**

ದಾವಣಗೆರೆ, ಡಿ.8- ಮಕ್ಕಳು ವಿದ್ಯಾವಂತರಾಗಿ ಶಿಕ್ಷಣದ ಮೂಲಕ ದೇಶದ ಭವಿಷ್ಯವನ್ನು ರೂಪಿಸಬೇಕು ಎಂದು ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಮಲ್ಲಾನಾಯ್ಕ್ ತಿಳಿಸಿದರು.

ಶುಕ್ರವಾರ ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಬಾಲಭವನ ಸಮಿತಿ (ರಿ) ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಜೆ.ಹೆಚ್ ಪಟೇಲ್ ಬಡಾವಣೆಯ ಬಾಲಭವನದಲ್ಲಿ ನಡೆದ ಮಕ್ಕಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ದಿನಾಚರಣೆಯು ಪ್ರತಿ ಮಗುವಿನ ವಿಶಿಷ್ಟ ಅಗತ್ಯತೆಗಳು ಮತ್ತು ಪ್ರತಿಭೆಗಳನ್ನು ಗುರುತಿಸುವ ಒಂದು ವಿಶೇಷ ಕಾರ್ಯಕ್ರಮವಾಗಿದ್ದು, ದೇಶದ ಭವಿಷ್ಯವನ್ನು ರೂಪಿಸಲು ಮಕ್ಕಳು ಉನ್ನತ ವ್ಯಾಸಂಗ ಪಡೆದು ಉತ್ತಮ ಪ್ರಜೆಗಳಾಗಬೇಕು ಎಂದರು.

ನಗರದಲ್ಲಿ ಬಾಲಭವನ ನಿರ್ಮಾಣವಾಗಿ ಐದು ವರ್ಷ ಕಳೆದರೂ ಯಾವುದೇ ಕಾರ್ಯಕ್ರಮ ನಡೆದಿಲ್ಲ, ಈ ದಿನ ವಿಶೇಷವಾಗಿ ಮುದ್ದು ಮಕ್ಕಳ ದಿನಾಚರಣೆಯನ್ನು ಆಚರಿಸುತ್ತಿರುವುದು ಎಲ್ಲರ ಮೊಗದಲ್ಲಿ ಸಂತಸ ತಂದಿದೆ. (2ನೇ ಪುಟಕ್ಕೆ)

# ಮೋಡ ಬಿತ್ತನೆಗೆ ಒಲವು

## ವಿಧಾನಸಭೆಯಲ್ಲಿ ಕೋಳಿವಾಡ ಪ್ರಶ್ನೆಗೆ ಉತ್ತರಿಸಿದ ಡಿಕೆಶಿ

ಬೆಳಗಾವಿ, ಡಿ. 8 - ರಾಜ್ಯ ಬರಗಾಲಕ್ಕೆ ತುತ್ತಾಗಿರುವ ಹಿನ್ನೆಲೆಯಲ್ಲಿ, ಮೋಡ ಬಿತ್ತನೆ ಕಾರ್ಯಕ್ಕೆ ಸರ್ಕಾರ ಒಲವು ವ್ಯಕ್ತಪಡಿಸಿದೆ.

ವಿಧಾನಸಭೆಯಲ್ಲಿಂದು ಶೂನ್ಯವೇಳೆಯಲ್ಲಿ ರಾಣೇಬೆನ್ನೂರು ಶಾಸಕ ಪ್ರಕಾಶ್ ಕೋಳಿವಾಡ ಅವರ ಪ್ರಸ್ತಾಪಕ್ಕೆ ಉತ್ತರಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈ ಒಲವು ವ್ಯಕ್ತಪಡಿಸಿದ್ದಾರೆ.

ಪ್ರಕಾಶ್ ಕೋಳಿವಾಡ ಮಾತನಾಡಿ, ರಾಜ್ಯದಲ್ಲಿ ಡಿಸೆಂಬರ್ 11 ರವರೆಗೂ ಮೋಡಗಳು ಹೆಚ್ಚಿರುತ್ತವೆ. ಹೀಗಾಗಿ ಮೋಡ ಬಿತ್ತನೆ ಮಾಡಿದರೆ ಒಳ್ಳೆಯ ಫಲಿತಾಂಶ ಬರಲಿದೆ. ಮಳೆಯಾದರೆ ಕುಡಿಯುವ ನೀರಿನ ಸಮಸ್ಯೆ ಸೇರಿದಂತೆ, ಹಲವು ಸಮಸ್ಯೆಗಳು ಸುಧಾರಿಸುತ್ತವೆ ಎಂದರು.

ಇವತ್ತು ಕಡಿಮೆ ಖರ್ಚಿನಲ್ಲಿ ಮೋಡ ಬಿತ್ತನೆಗೆ ಅವಕಾಶವಿದೆ. ಈ ನಿಟ್ಟಿನಲ್ಲಿ ತಂತ್ರಜ್ಞರ ಜೊತೆ ತಾವು ಚರ್ಚೆ ಮಾಡಿದ್ದು, ಎಲ್ಲಾ ರೀತಿಯ ಸಿದ್ಧತೆಗಳೂ ಲಭ್ಯ ಇವೆ. ಸರ್ಕಾರ ಇಂದೇ ತೀರ್ಮಾನ ಮಾಡಿದರೆ, ಮೋಡ ಬಿತ್ತನೆಯಾಗಲಿದೆ. ಜನರಿಗೆ ಅನುಕೂಲವಾಗಲಿದೆ ಎಂದರು.

ಆಡಳಿತ ಪಕ್ಷದ ಶಾಸಕ ಕೋ.ನ.ರೆಡ್ಡಿ ಇದಕ್ಕೆ




ಬೆಂಬಲ ವ್ಯಕ್ತಪಡಿಸಿದಾಗ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ಮಾತನಾಡಿ, ಮೋಡ ಬಿತ್ತನೆಗೆ ಉಪಮುಖ್ಯಮಂತ್ರಿಯವರು ಉತ್ತರಿಸುತ್ತಾರೆ ಎಂದು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಪ್ರಕಾಶ್ ಕೋಳಿವಾಡ ಅವರು ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಮೋಡ ಬಿತ್ತನೆ ಮಾಡುವ ಕಂಪನಿಗಳ ಜೊತೆ ಈಗಾಗಲೇ ಮಾತುಕತೆ ನಡೆಸಿದ್ದಾರೆ. ಸ್ವಂತ ಖರ್ಚಿನಲ್ಲಿ ಮೋಡ ಬಿತ್ತನೆ ಮಾಡಲು ಕೂಡ ಅವರು ಆಸಕ್ತಿ ತೋರಿಸಿದ್ದಾರೆ ಎಂದರು.

> **ಮೋಡ ಬಿತ್ತನೆಗೆ ತಾಂತ್ರಿಕ ತೊಂದರೆಗಳಿವೆ. ಟೆಂಡರ್ ಕರೆಯುವುದೂ ಸೇರಿದಂತೆ, ಹಲವಾರು ಪ್ರಕ್ರಿಯೆಗಳನ್ನು ಅನುಸರಿಸಬೇಕು. ಆದಾಗ್ಯೂ ಹಣಕಾಸು ಇಲಾಖೆ ಅಕಾರಿಗಳ ಜೊತೆ ಸಮಾಲೋಚನೆ ನಡೆಸಿ, ಯಾವ ರೀತಿ ನೆರವು ನೀಡಬಹುದೆಂಬುದನ್ನು ಪರಿಶೀಲಿಸುತ್ತೇನೆ.**
> **- ಡಿ.ಕೆ. ಶಿವಕುಮಾರ್**

ಜನರಿಗೆ ಒಳ್ಳೆಯದನ್ನು ಮಾಡಬೇಕೆನ್ನುವ ಅವರ ಆಸಕ್ತಿ ಶ್ಲಾಘನೀಯ. ನಾನು ಕೂಡ ಮೋಡ ಬಿತ್ತನೆಯ ಪರವಾಗಿದ್ದೇನೆ. ಆದರೆ, ಕೆಲವು ತಾಂತ್ರಿಕ ತೊಂದರೆಗಳಿವೆ. ಟೆಂಡರ್ ಕರೆಯುವುದೂ ಸೇರಿದಂತೆ, ಹಲವಾರು ಪ್ರಕ್ರಿಯೆಗಳನ್ನು ಅನುಸರಿಸಬೇಕು. ಆದರೂ ತಾವು ಹಣಕಾಸು ಇಲಾಖೆಯ ಅಕಾರಿಗಳ ಜೊತೆ ಸಮಾಲೋಚನೆ ನಡೆಸಿ, ಯಾವ ರೀತಿ (2ನೇ ಪುಟಕ್ಕೆ)



## ಹೆಗಡೆ ನಗರ ನಿವಾಸಿಗಳ ವಾಸಕ್ಕೆ ಅವಕಾಶ ನೀಡಿದ್ದ ಬಡಾವಣೆ ಪರಿಶೀಲಿಸಿದ ಎಸ್ಸೆಸ್

ದಾವಣಗೆರೆ, ಡಿ.8- ನಗರದ ರಿಂಗ್ ರಸ್ತೆಯನ್ನು ಒತ್ತುವರಿ ಮಾಡಿಕೊಂಡಿದ್ದ ರಾಮಕೃಷ್ಣ ಹೆಗಡೆ ನಗರದ ನಿವಾಸಿ ಗಳನ್ನು ಮಹಾನಗರ ಪಾಲಿಕೆ ವತಿಯಿಂದ ಪ್ರತ್ಯೇಕ ಬಡಾವಣೆಯಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಈ ಸ್ಥಳಕ್ಕೆ ಶುಕ್ರವಾರ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್, ಎಸ್ಪಿ ಉಮಾ ಪ್ರಶಾಂತ್, ನಗರ ಪಾಲಿಕೆ ಆಯುಕ್ತರಾದ ರೇಣುಕಾ, ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಕೋಟೂರು ಬಸವನಗೌಡ, ಸ್ಮಾರ್ಟ್ ಸಿಟಿ ಎಂ.ಡಿ. ವೀರೇಶ್ ಕುಮಾರ್, ಬೆಸ್ಕಾಂನ ಪಾಟೀಲ್ ಮತ್ತು ಜಿ.ಎಂ.ನಾಯ್ಕ, ನಿರ್ಮಿತಿ ಕೇಂದ್ರದ ರವಿ ಮತ್ತು ಶಿವಕುಮಾರ್ ಸೇರಿದಂತೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಪಾಲ್ಗೊಂಡಿದ್ದರು.

ನಿವೇಶನದಲ್ಲಿ ವಾಸವಿರುವ ನಿವಾಸಿಗಳ ಅಹವಾಲುಗಳನ್ನು ಸ್ವೀಕರಿಸಿದ ಶಾಸಕರು, ಸಮಸ್ಯೆಗಳನ್ನು ಶೀಘ್ರ ಬಗೆಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು ಹಾಗೂ ಅಲ್ಲಿನ ನಿವಾಸಿಗಳಿಗೆ ಉಪಹಾರ ಉಣಬಡಿಸಿದರು. ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿ, ಕಳೆದ 40 ವರ್ಷಗಳಿಂದ ಸಮಸ್ಯೆಯಾಗಿದ್ದ ರಸ್ತೆ ಒತ್ತುವರಿ ಪರಿಹಾರ ಕಾರ್ಯವನ್ನು ಬಗೆಹರಿಸಲಾಗಿದ್ದು ಶೀಘ್ರದಲ್ಲೇ ನಿವಾಸಿಗಳಿಗೆ ಶಾಶ್ವತ ಸೂರು ಕಲ್ಪಿಸುವುದಾಗಿ ಹೇಳಿದರು.

## ಎಸ್‌ಜೆಎಂ ವಿದ್ಯಾಪೀಠದ ಸಿಇಓ ಸೇವೆಯಿಂದ ಬಿಡುಗಡೆ

ಚಿತ್ರದುರ್ಗ, ಡಿ. 8- ಮುರುಘಾಮಠದ ಎಸ್‌ಜೆಎಂ ವಿದ್ಯಾಪೀಠದ ಸಿಇಓ ಆಗಿ ಸೇವೆ ಸಲ್ಲಿಸುತ್ತಿದ್ದ ಎಂ. ಭರತ್ ಕುಮಾರ್ ಅವರನ್ನು ಸೇವೆಯಿಂದ ಬಿಡುಗಡೆಗೊಳಿಸಿ ಶ್ರೀಮಠದ ಪೀಠಾಧ್ಯಕ್ಷರಾದ ಡಾ.ಶಿವಮೂರ್ತಿ ಮುರುಘಾ ಶರಣರು ಆದೇಶಿಸಿರುವುದಾಗಿ ಮಠದ ಉಸ್ತುವಾರಿಗಳಾದ ಶ್ರೀ ಬಸವಪ್ರಭು ಸ್ವಾಮೀಜಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ನಿನ್ನೆಯಷ್ಟೇ ಮುರುಘಾ ಶರಣರು ಮಠದ ಆಡಳಿತಾಧಿಕಾರ ಸ್ವೀಕರಿಸಿದ್ದರು. ಇದರ ಬೆನ್ನಲ್ಲೇ ಇದೀಗ ವಿದ್ಯಾಪೀಠದ ಸಿಇಓ ಆಗಿದ್ದ ಭರತ್ ಅವರನ್ನು ಬಿಡುಗಡೆಗೊಳಿಸಲಾಗಿದೆ.

## ಹಿರಿಯ ನಟಿ ಲೀಲಾವತಿ ಇನ್ನಿಲ್ಲ



ಬೆಂಗಳೂರು, ಡಿ. 8 - ಕನ್ನಡ ಚಿತ್ರರಂಗದ ಹಿರಿಯ ನಟಿ ಲೀಲಾವತಿ ಅವರು ವಯೋಸಹಜ ಅನಾರೋಗ್ಯದಿಂದ ನಿಧನರಾಗಿದ್ದಾರೆ.

85 ವರ್ಷದ ನಟಿ ನೆಲಮಂಗಲದ ಖಾಸಗಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ. ಅವರು ಪುತ್ರ ವಿನೋದ್‌ರಾಜ್‌ರನ್ನು ಅಗಲಿದ್ದಾರೆ. ನೆಲಮಂಗಲದ ಅಂಬೇಡ್ಕರ್ ಮೈದಾನದಲ್ಲಿ ನಾಳೆ ಮಧ್ಯಾಹ್ನದವರೆಗೂ ಸಾರ್ವಜನಿಕರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

1938ರಲ್ಲಿ ದಕ್ಷಿಣ ಕನ್ನಡದ ಬೆಳ್ತಂಗಡಿಯಲ್ಲಿ ಜನಿಸಿದ್ದ ಲೀಲಾವತಿ ಅವರು 50 ವರ್ಷಗಳ ಕಾಲ ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದ್ದರು. ಕನ್ನಡದ 400 ಚಿತ್ರಗಳಲ್ಲದೇ ತಮಿಳು, ತೆಲುಗು ಸೇರಿ 600ಕ್ಕೂ ಅಧಿಕ ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ.

ಲೀಲಾವತಿ ಅವರು 'ತುಂಬಿದ ಕೊಡ', 'ಮಹಾತ್ಯಾಗ', 'ಭಕ್ತ ಕುಂಬಾರ', 'ಗೆಜ್ಜೆ ಪೂಜೆ' ಚಿತ್ರಗಳಲ್ಲಿನ ಮನೋಜ್ಞ ಅಭಿನಯದ ಮೂಲಕ ಹೆಸರು ಗಳಿಸಿದ್ದರು. ಜೀವಮಾನ ಸಾಧನೆಗಾಗಿ 1999ರಲ್ಲಿ ಡಾ. ರಾಜ್‌ಕುಮಾರ್ ಪ್ರಶಸ್ತಿ ಪಡೆದಿದ್ದರು. 2008ರಲ್ಲಿ ತುಮಕೂರು ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ನೀಡಿತ್ತು. 'ಮದುವೆ ಮಾಡಿ ನೋಡು' ಮತ್ತು 'ಸಂತ ತುಕಾರಾಮ್' ಸಿನಿಮಾಗಳಿಗೆ ಲೀಲಾವತಿ ಅವರು 2 ರಾಷ್ಟ್ರ ಪ್ರಶಸ್ತಿ ಪಡೆದಿದ್ದರು. ಕನ್ನಡ ಚಿತ್ರರಂಗದ ಹೆಸರಾಂತ ನಟಿ ಲೀಲಾವತಿ ಅವರ ನಿಧನದ ಸುದ್ದಿ ಕೇಳಿ ದುಃಖವಾಯಿತು. ಸಿನಿಮಾದ ನೈಜ ಪ್ರತೀಕ ವಾದ ಅವರು ಹಲವಾರು ಚಲನ ಚಿತ್ರಗಳಲ್ಲಿ ತಮ್ಮ ಬಹುಮುಖ ನಟನೆಯೊಂದಿಗೆ ಬೆಳ್ಳಿ ಪರದೆಯನ್ನು (2ನೇ ಪುಟಕ್ಕೆ)

## ಗೃಹ ಸಾಲದ ಅಡ್ಡಿ ಎರಡು ತಿಂಗಳಲ್ಲಿ ಪರಿಹಾರ : ಸಚಿವ ರಹೀಂ ಖಾನ್

ಬೆಳಗಾವಿ, ಡಿ. 8 - ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆ ನಿರ್ಮಾಣಕ್ಕೆ ಸಾಲ ಪಡೆಯಲು ಎದುರಾಗಿರುವ ಅಡ್ಡಿಯನ್ನು ಎರಡು ತಿಂಗಳಲ್ಲಿ ಪರಿಹರಿಸುವುದಾಗಿ ಪೌರಾಡಳಿತ ಸಚಿವ ರಹೀಂ ಖಾನ್ ವಿಧಾನಸಭೆಯಲ್ಲಿ ಭರವಸೆ ನೀಡಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಸತೀಶ್ ಸೈಲ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮನೆ ನಿರ್ಮಿಸುವವರಿಗೆ ಫಾರಂ-3 ಕೊಡುವ ಕೆಲಸವಾಗಬೇಕು. ಆದರೆ ಸ್ಥಳೀಯ ಸಂಸ್ಥೆಗಳಲ್ಲಿ ಇದು ಸಮರ್ಪಕವಾಗಿ ಸಿಗುತ್ತಿಲ್ಲ ಎಂಬ ದೂರುಗಳಿದ್ದು, ಇದನ್ನು ಎರಡು ತಿಂಗಳಲ್ಲಿ ಬಗೆಹರಿಸುವುದಾಗಿ ಎಂದರು.

ಇದಕ್ಕೂ ಮುನ್ನ ಸತೀಶ್ ಸೈಲ್ ಮಾತನಾಡಿ, ಶಿರಸಿ-ಸಿದ್ಧಾಪುರ ಕ್ಷೇತ್ರದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಫಾರಂ ನಂ-3 ನೀಡುತ್ತಿಲ್ಲ. ಇದರಿಂದ ಪಟ್ಟಣ ಪಂಚಾಯಿತಿ, ನಗರಸಭೆ, ಪುರಸಭೆಗಳಲ್ಲಿರುವ ತಮ್ಮ ಮನೆಗಳ ನಿರ್ಮಾಣಕ್ಕೆ ಸಾಲ ಪಡೆಯಲು ಅವಕಾಶಗಳಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದಕ್ಕೆ ಬೆಂಬಲವಾಗಿ ಮಾತನಾಡಿದ ಜಿ.ಟಿ. ದೇವೇಗೌಡ, ಗ್ರಾಮ ಪಂಚಾಯಿತಿಗಳಿಂದ ಮೇಲ್ದರ್ಜೆಗೇರಿರುವ ನಗರ ಸಂಸ್ಥೆಗಳಲ್ಲಿ ಅರ್ಜಿ ನಮೂನೆ-11 'ಬಿ' ನೀಡುತ್ತಿಲ್ಲ. ಜನ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ವಿವರಿಸಿದರು. ಶಾಸಕರಾದ ಕೋ. ನ. ರೆಡ್ಡಿ, ಸತೀಶ್ ಸೈಲ್ ಸೇರಿದಂತೆ, ಮತ್ತಿತರರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಸಚಿವ ರಹೀಂಖಾನ್ ಮಾತನಾಡಿ, ಇದು ರಾಜ್ಯಾದ್ಯಂತ ಗಂಭೀರ ಸ್ವರೂಪದ ಸಮಸ್ಯೆಯಾಗಿದೆ, ಅದರ ನಿವಾರಣೆಗಾಗಿ ಸಚಿವ ಸಂಪುಟ ಉಪಸಮಿತಿಯನ್ನು (2ನೇ ಪುಟಕ್ಕೆ)

## 'ಬೆಳೆಹಾನಿ ಪರಿಹಾರ'ಕ್ಕೆ ಮಾರ್ಗಸೂಚಿ

ಬೆಳಗಾವಿ, ಡಿ. 8 - ಮುಂಗಾರು ಹಂಗಾಮಿನ ಬೆಳೆ ಹಾನಿ ಪರಿಹಾರಕ್ಕೆ ಸಂಬಂಧಿಸಿದಂತೆ, ಒಂದೆರಡು ದಿನಗಳಲ್ಲಿ ಮಾರ್ಗಸೂಚಿ ಬಿಡುಗಡೆ ಮಾಡಲಾಗುವುದು ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದ್ದಾರೆ.

ವಿಧಾನ ಪರಿಷತ್ತಿನ ಪ್ರಶ್ನೋತ್ತರ ಕಲಾಪದಲ್ಲಿಂದು ಸದಸ್ಯ ಶರಣಗೌಡ ಬಯ್ಯಾಪುರ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರೈತರಿಗೆ ಅವರ ಜಮೀನಿಗೆ ಅನುಗುಣವಾಗಿ 2 ಸಾವಿರ ರೂಪಾಯಿವರೆಗೆ ಬೆಳೆ ಪರಿಹಾರದ ಹಣವನ್ನು ಡಿಬಿಟಿ ಮೂಲಕ ನೇರವಾಗಿ ಜಮೆ ಮಾಡಲಾಗುವುದು. ಈ ಸಂಬಂಧ ಮಾರ್ಗಸೂಚಿಯನ್ನು ನಾಳೆ ಅಥವಾ ನಾಡಿದ್ದು ಬಿಡುಗಡೆ ಮಾಡುತ್ತೇವೆ ಎಂದರು. (2ನೇ ಪುಟಕ್ಕೆ)

## ಸದನದಲ್ಲಿ ರೈತರ ಪರ ಧ್ವನಿ ಎತ್ತಿದ ಶಾಸಕ ಬಸವಂತಪ್ಪ




ದಾವಣಗೆರೆ, ಡಿ. 8- ಮಾಯಕೊಂಡ ಕ್ಷೇತ್ರದ ಜನರ ಜ್ವಲಂತ ಸಮಸ್ಯೆಗಳು, ಈ ಬಾರಿ ಮಳೆ ಇಲ್ಲದೆ ಬರಗಾಲ ಎದುರಾಗಿ, ರೈತರು ಅನುಭವಿಸುತ್ತಿರುವ ಕಷ್ಟಗಳನ್ನು ಶಾಸಕ ಕೆ.ಎಸ್. ಬಸವಂತಪ್ಪ ಸದನದಲ್ಲಿ ಎಳೆ ಎಳೆಯಾಗಿ ಬಿಚ್ಚಿಟ್ಟರು.

ಬೆಳಗಾವಿಯ ಸುವರ್ಣ ಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಶುಕ್ರವಾರ ರಾಜ್ಯದಲ್ಲಿ ಭೀಕರ ಬರಗಾಲ ಎದುರಾಗಿರುವ ಹಿನ್ನೆಲೆಯಲ್ಲಿ ಸಭಾಧ್ಯಕ್ಷರು ಈ ವಿಷಯದ ಬಗ್ಗೆ ಚರ್ಚೆಗೆ ಅವಕಾಶ ನೀಡಿದಾಗ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ , ಮಳೆ ಇಲ್ಲದೆ, ಬೆಳೆ ಇಲ್ಲದೆ ಮಾಯಕೊಂಡ ಕ್ಷೇತ್ರದ ರೈತರು ಅನುಭವಿಸುತ್ತಿರುವ ನೋವು-ಸಂಕಟಗಳನ್ನು ಗಂಭೀರವಾಗಿ ಚರ್ಚಿಸುವ ಮೂಲಕ ಸದನದ ಗಮನ ಸೆಳೆದರು.

ಮಾಯಕೊಂಡ ಕ್ಷೇತ್ರದಲ್ಲಿ ಪ್ರತಿವರ್ಷ ಸುಮಾರು 80 ಪರ್ಸೆಂಟ್ ಮೆಕ್ಕೆಜೋಳವನ್ನು ರೈತರು ಬೆಳೆಯುತ್ತಿದ್ದಾರೆ. ಮೆಕ್ಕೆಜೋಳ ಬೆಳೆದ ರೈತರಿಗೆ ಬೆಂಬಲ ಬೆಲ ಸಿಗುತ್ತಿಲ್ಲ. ಖರೀದಿ ಕೇಂದ್ರ ತೆರೆಯುವ ಕೆಲಸವನ್ನು ಸರ್ಕಾರ ಮಾಡಬೇಕಿದೆ. ನಮ್ಮ ಕ್ಷೇತ್ರದಲ್ಲಿ 22 ಕೆರೆಗಳಿಗೆ ನೀರಿಲ್ಲ. ಇದರಿಂದ ಜನರು ಕುಡಿಯುವ ನೀರಿಗೆ, ನೀರಾವರಿ ಬೆಳೆಗಳಿಗೆ ನೀರು ಇಲ್ಲದೆ ರೈತರು ಮತ್ತು ಜನರು ಪರಿತಪಿಸುತ್ತಿದ್ದಾರೆ. ಈ ಬಗ್ಗೆ ರಾಜ್ಯ ಸರ್ಕಾರ ಗಮನಹರಿಸಬೇಕು ಎಂದರು.

ಜೊತೆಗೆ ಭದ್ರಾ ಕಾಲುವೆಗಳಲ್ಲಿ ಹರಿದ ಅರೆಬರೆ ನೀರಿನಿಂದ ಭತ್ತ ಬೆಳೆದಿದ್ದು, ಕೂಡಲೇ ಭತ್ತದ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಖಾಸಗಿಯವರು ಭತ್ತ (2ನೇ ಪುಟಕ್ಕೆ)

## ಪರಿಶಿಷ್ಟರ ಅನುದಾನ ದುರ್ಬಳಕೆಗೆ ಅವಕಾಶವಿಲ್ಲ : ಮಹಾದೇವಪ್ಪ



ಬೆಳಗಾವಿ, ಡಿ. 8 - ರಾಜ್ಯ ಸರ್ಕಾರವು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗೆ ಮೀಸಲಿಟ್ಟಿರುವ ಅನುದಾನವನ್ನು ಯಾವುದೇ ಕಾರಣಕ್ಕೂ ದುರ್ಬಳಕೆ ಆಗಲು ಅವಕಾಶ ನೀಡುವುದಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹಾದೇವಪ್ಪ ವಿಧಾನ ಪರಿಷತ್ತಿನಲ್ಲಿಂದು ಸ್ಪಷ್ಟಪಡಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಛಲವಾದಿ ನಾರಾಯಣಸ್ವಾಮಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅಧಿನಿಯಮ 2013 ಮತ್ತು ನಿಯಮಗಳು 2017ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ನೇರವಾಗಿ ಪ್ರಯೋಜನವಾಗಲಿವೆ ಎಂದು ಹೇಳಿದರು.

ಈ ಯೋಜನೆಯಡಿ ಅನುದಾನವನ್ನು ಹಂಚಿಕೆ ಮಾಡಿ ಅನುಷ್ಠಾನಗೊಳಿಸಲು ಅವಕಾಶವಿದ್ದು, ಅನುದಾನವನ್ನು ಯಾವುದೇ ಸಂದರ್ಭದಲ್ಲೂ ಅನ್ಯ ಉದ್ದೇಶಕ್ಕಾಗಿ ಬಳಸುವುದಿಲ್ಲ ಹಾಗೂ ಕಾಯ್ದೆಯ ಉಲ್ಲಂಘನೆಯ ಅವಕಾಶ ನೀಡುವುದಿಲ್ಲ ಎಂದು ತಿಳಿಸಿದರು. (2ನೇ ಪುಟಕ್ಕೆ)

## ಸ್ವಚ್ಛ ಭಾರತಕ್ಕೆ 2912 ಕೋಟಿ ರೂ. ಅನುದಾನ

ಬೆಳಗಾವಿ, ಡಿ. 8 - ಸ್ವಚ್ಛ ಭಾರತ ಮಿಷನ್ ಯೋಜನೆಗೆ ರೂ.2912 ಕೋಟಿ ರೂ. ಅನುದಾನವನ್ನು ಮೀಸಲು ಇರಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬಿ. ಸುರೇಶ್ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದರು.

ರಾಜ್ಯ ಎಲ್ಲಾ ಸ್ಥಳೀಯ ನಗರಾಭಿವೃದ್ಧಿ ಸಂಸ್ಥೆಗಳಲ್ಲಿ ಸ್ವಚ್ಛ ಭಾರತ್ ಮಿಷನ್ ಅನುಷ್ಠಾನ ಮಾಡಲು ಪ್ರತ್ಯೇಕ ಐ.ಎ.ಎಸ್ ಅಧಿಕಾರಿ ನೇಮಿಸಲಾಗಿದೆ.

ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ, ಸಾಗಣೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಅಗತ್ಯ ಇರುವ ಯಂತ್ರೋಪಕರಣಗಳನ್ನು ಮತ್ತು ಸಿವಿಲ್ ಕಾಮಗಾರಿಗೆ ಕೈಗೊಳ್ಳಲು ವಿಸ್ತೃತ ಯೋಜನೆಗೆ ಅನುಮತಿ ನೀಡಲಾಗಿದೆ ಎಂದರು.

## ಜ್ಯೋತಿ ಸ್ವರೂಪನಾದ ಪರಮಾತ್ಮನೇ ಜ್ಯೋತಿರ್ಲಿಂಗ



**'ಶರಣರು ಕಂಡ ಶಿವ' ಪ್ರವಚನ ಮಾಲೆಯಲ್ಲಿ ಡಾ.ಬಸವರಾಜ ರಾಜಋಷಿ**

ದಾವಣಗೆರೆ, ಡಿ. 8- ಆತ್ಮಗಳು ಹೇಗೆ ಜ್ಯೋತಿ ಸ್ವರೂಪದಲ್ಲಿವೆಯೋ ಹಾಗೆ ಪರಮಾತ್ಮನೂ ಸಹ ಜ್ಯೋತಿ ಸ್ವರೂಪದಲ್ಲಿದ್ದಾನೆ. ಹೀಗಾಗಿ ಅವನಿಗೆ ನಾವು ಜ್ಯೋತಿರ್ಲಿಂಗ ಎಂದು ಕರೆಯುತ್ತೇವೆ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಹುಬ್ಬಳ್ಳಿ ಉಪ ವಲಯದ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ವಿಶ್ಲೇಷಿಸಿದರು.

ಇಲ್ಲಿನ ವಿದ್ಯಾನಗರದಲ್ಲಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ 'ಶರಣರು ಕಂಡ ಶಿವ' ಪ್ರವಚನ ಮಾಲೆಯ ಐದನೇ ದಿನವಾದ ಶುಕ್ರವಾರದ ಸಮಾರಂಭದಲ್ಲಿ ಅವರು ಪ್ರವಚನ ನೀಡಿದರು.

ನಾವು ಪರಮಾತ್ಮನ ರೂಪವನ್ನು ಶಿಲೆಗಳಿಂದ ಮಾಡಿ, ಅದನ್ನು ಪೀಠದಲ್ಲಿಟ್ಟು ಈಶ್ವರ ಎಂದು ಉಪಾಸನೆ ಮಾಡುತ್ತಿದ್ದೇವೆ ಎಂದು ಹೇಳಿದರು.

ಆತ್ಮನೂ ಕಾಣುವುದಿಲ್ಲ, ಪರಮಾತ್ಮನೂ ಕಾಣುವುದಿಲ್ಲ. ಈ ಸತ್ಯ ಅರ್ಥ ಮಾಡಿಕೊಳ್ಳದೆ ನಾವೆಲ್ಲಾ ದೇವಸ್ಥಾನಗಳಿಗೆ ಹೋಗುತ್ತಿದ್ದೇವೆ. ತೀರ್ಥ ಕ್ಷೇತ್ರ ಸುತ್ತುತ್ತೇವೆ. ಆದರೆ, ಅನುಭವ ಮಂಟಪದಲ್ಲಿ ಶರಣರು ಈ ಸತ್ಯವನ್ನು ಜ್ಞಾನಯುಕ್ತವಾಗಿ ಪಡೆದಿದ್ದರು. ಅಂತಹ ಎಲ್ಲಾ ಶರಣರಿಗೆ ಶಿವಾನುಭಾವಿಗಳು ಎಂದು ಕರೆಯಲಾಗುತ್ತದೆ ಎಂದು ಅವರು ನುಡಿದರು.

ಪರಮಾತ್ಮನನ್ನು ಜ್ಞಾನದಿಂದ ಅರ್ಥ ಮಾಡಿಕೊಂಡ ಪೂರ್ವಜರು, ಲಿಂಗ ಹಾಗೂ ಪೀಠಗಳನ್ನು ದೇವಾಲಯಗಳಲ್ಲಿ ಸ್ಥಾಪಿಸಿದರು. ಕಾಶಿ, ಸೋಮನಾಥ, ಶ್ರೀಶೈಲ ಸೇರಿದಂತೆ, ಹಲ ವೆಡೆ ಪೀಠ ಇಲ್ಲದ ಲಿಂಗಗಳೂ ಇವೆ. ಮತ್ತೆ ಕೆಲವಡೆ ಪೀಠ ಹಾಗೂ ಲಿಂಗ ಎರಡನ್ನೂ ಕಾಣುತ್ತೇವೆ. ಅವೆಲ್ಲವೂ ಪರಮಾತ್ಮ ಜ್ಯೋತಿ ಎಂದು ನಾವು ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ನಾವೆಲ್ಲಾ ತಾಯಿ ಗರ್ಭದಲ್ಲಿ ಜನ್ಮಪಡೆದವರು. ಎಲ್ಲರೂ ದೇಹಧಾರಿಗಳು. ಆದರೆ, ಪರಮಾತ್ಮನು ಜನನ, ಮರಣ ರಹಿತನು, (4ನೇ ಪುಟಕ್ಕೆ)

## ವಕ್ಫ್ ಕಾಯ್ದೆ ವಾಪಸ್‌ಗೆ ಖಾಸಗಿ ಮಸೂದೆ

ನವದೆಹಲಿ, ಡಿ. 8- 1995ರ ವಕ್ಫ್ ಕಾಯ್ದೆಯನ್ನು ವಾಪಸ್ ಪಡೆಯಲು ರಾಜ್ಯಸಭೆಯಲ್ಲಿ ಖಾಸಗಿ ಮಸೂದೆ ಸಲ್ಲಿಸಲಾಗಿದೆ. ಪ್ರತಿಪಕ್ಷಗಳ ವಿರೋಧದ ನಡುವೆ, ನಿಲುವಳಿಯನ್ನು ಮತಕ್ಕೆ ಹಾಕಿದ ನಂತರ ಮಸೂದೆಯನ್ನು ಸಲ್ಲಿಸಲಾಗಿದೆ.

ವಕ್ಫ್ ವಾಪಸಾತಿ ಮಸೂದೆ 2022 ಅನ್ನು ಬಿಜೆಪಿ ಸಂಸದ ಹರನಾಥ್ ಸಿಂಗ್ ಯಾದವ್ ಸಲ್ಲಿಸಿದ್ದಾರೆ. ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಸಿಪಿಐ, ಸಿಪಿಐ (ಎಂ) ಹಾಗೂ ಆರ್.ಜೆ.ಡಿ. (2ನೇ ಪುಟಕ್ಕೆ)

## ಈರುಳ್ಳಿ ರಫ್ತು ನಿಷೇಧದ ವಿರುದ್ಧ ರೈತರ ಪ್ರತಿಭಟನೆ

ಮುಂಬೈ, ಡಿ. 8 – ಕೇಂದ್ರ ಸರ್ಕಾರ ಈರುಳ್ಳಿ ರಫ್ತಿನ ಮೇಲೆ ನಿಷೇಧ ಹೇರಿರುವುದನ್ನು ಪ್ರತಿಭಟಿಸಿ ಮಹಾರಾಷ್ಟ್ರದ ರೈತರು ಹೆದ್ದಾರಿ ತಡೆ ನಡೆಸಿದ್ದಾರೆ.

ಮಾರ್ಚ್ 31, 2024ರವರೆಗೆ ಕೇಂದ್ರ ಸರ್ಕಾರ ಈರುಳ್ಳಿ ರಫ್ತಿನ ಮೇಲೆ ನಿಷೇಧ ಹೇರಿದೆ. ದೇಶೀಯವಾಗಿ ಈರುಳ್ಳಿ ಲಭ್ಯತೆ ಹೆಚ್ಚಿಸಲು ಹಾಗೂ ಬೆಲೆಗಳನ್ನು ನಿಯಂತ್ರಣದಲ್ಲಿಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ನಾಸಿಕ್ ಜಿಲ್ಲೆಯ ಲಸಲ್‌ಗಾಂವ್, ನಂದಗಾಂವ್, ದಿಂಡೋರಿ, ಯೋಲಾ, ಉಮರಣೆ ಹಾಗೂ ಇತರೆ ಪ್ರದೇಶಗಳಲ್ಲಿ ರೈತರು ಈರುಳ್ಳಿ ಹರಾಜನ್ನು ತಡೆದು ಪ್ರತಿಭಟಿಸಿದ್ದಾರೆ. ನಾಸಿಕ್ ದೇಶದ ಅತಿ ದೊಡ್ಡ ಈರುಳ್ಳಿ ಮಾರುಕಟ್ಟೆಯಾಗಿದೆ.

ಮುಂಬೈ - ಆಗ್ರಾ ಹೆದ್ದಾರಿಯ ಮೂರು ಕಡೆಗಳಲ್ಲಿ ರೈತರು ಟ್ರ್ಯಾಕ್ಟರ್‌ಗಳನ್ನು ನಿಲ್ಲಿಸಿ ಪ್ರತಿಭಟಿಸಿದ್ದಾರೆ. ಜೈಖೇಡ, ಚಂದ್ವಾಡ, ಉಮರಣೆ, ನಂದಗಾಂವ್ ಹಾಗೂ ಮುಗ್ಸೆಗಳಲ್ಲಿ ರೈತರು ರಸ್ತೆ ತಡೆ ನಡೆಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಲಸಲ್‌ಗಾಂವ್ ಎ.ಪಿ.ಎಂ.ಸಿ. ಅಧ್ಯಕ್ಷ ಬಾಳಾ ಸಾಹೇಬ್ ಕ್ಷೀರಸಾಗರ್, ಕೇಂದ್ರ ಸರ್ಕಾರದ ನಿರ್ಧಾರ ರೈತರ ಪರವಾಗಿಲ್ಲ. ಈರುಳ್ಳಿ ಬೆಲೆಗಳು ತೀವ್ರವಾಗಿ ಏರಿಕೆಯಾಗಿಲ್ಲ. ಕಳೆದ ಐದಾರು ದಿನಗಳಲ್ಲಿ ಬೆಲೆ ಇಳಿಕೆಯಾಗಿದೆ. ಇದರಿಂದ ರೈತರಿಗೆ ನಷ್ಟವಾಗಿದೆ ಎಂದಿದ್ದಾರೆ.

ಪ್ರಸಕ್ತ ಈರುಳ್ಳಿ ಬೆಲೆ ಕ್ವಿಂಟಾಲ್‌ಗೆ 1,000ದಿಂದ 1,200 ರೂ.ಗಳಷ್ಟಿದೆ. ಆದರೆ, ಜನರಿಗೆ ಕ್ವಿಂಟಾಲ್‌ಗೆ 3 ಸಾವಿರ ರೂ.ಗಳಂತೆ ಮಾರಾಟ ಮಾಡಲಾಗುತ್ತಿದೆ. ಮಧ್ಯವರ್ತಿಗಳು ಬೆಲೆ ಏರಿಕೆ ಮಾಡುತ್ತಿದ್ದಾರೆ ಎಂದವರು ಆರೋಪಿಸಿದ್ದಾರೆ.

ಮಧ್ಯವರ್ತಿಗಳು ಇರಬಾರದು. ಸರ್ಕಾರವೇ ನೇರವಾಗಿ ಈರುಳ್ಳಿ ಮಾರಾಟ ಮಾಡಬೇಕು ಎಂದೂ ಅವರು ಒತ್ತಾಯಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ (5ನೇ ಪುಟಕ್ಕೆ)

## ಲೇಬರ್ ಕಾಲೋನಿಯಲ್ಲಿ ಇಂದು ಶ್ರೀ ಶಬರಿಮಲೈ ಅಯ್ಯಪ್ಪ ಸ್ವಾಮಿ ದೀಪೋತ್ಸವ

ದಾವಣಗೆರೆ ಲೇಬರ್ ಕಾಲೋನಿಯಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಸ್ವಾಮಿ ಅಯ್ಯಪ್ಪ ಶಬರಿಮಲೈ ಸೇವಾ ಸಮಿತಿ ವತಿಯಿಂದ ನಾಳೆ ದಿನಾಂಕ 9 ರಿಂದ 11 ರವರೆಗೆ ಶ್ರೀ ಶಬರಿಮಲೈ ಅಯ್ಯಪ್ಪ ಸ್ವಾಮಿಯ ಮಹಾ ದೀಪೋತ್ಸವ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಗ್ಗೆ 6 ಗಂಟೆಗೆ ಅಷ್ಟೋತ್ತರ ಮಹಾಪೂಜೆ ನೆರವೇರಲಿದೆ. ಮಧ್ಯಾಹ್ನ 1 ಕ್ಕೆ ಅನ್ನ ಸಂತರ್ಪಣೆ ಕಾರ್ಯಕ್ರಮವಿದ್ದು, ಸಚಿವ ಶಾಮನೂರು ಮಲ್ಲಿಕಾರ್ಜುನ್ ಚಾಲನೆ ನೀಡುವರು. ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್ ಭಾಗವಹಿಸುವರು.

ನಾಳೆ ಭಾನುವಾರ ಬೆಳಿಗ್ಗೆ 5 ಗಂಟೆಯಿಂದ 6.30 ರವರೆಗೆ ಗಣಪತಿ ಹೋಮ ಮತ್ತು ಪೂರ್ಣಾಹುತಿ ನಡೆಯಲಿದೆ. ಬೆಳಗ್ಗೆ 7 ರಿಂದ 7.30 ರವರೆಗೆ ಸ್ವಾಮಿಯನ್ನು ಬಾಳೆ ಮಂಟಪದಲ್ಲಿ ಪ್ರತಿಷ್ಠಾಪನೆ ಮಾಡಲಾಗುವುದು. ಮಧ್ಯಾಹ್ನ 3 ಗಂಟೆಗೆ ದೀಪೋತ್ಸವವಿದ್ದು, ಸಂಸದ ಜಿ.ಎಂ.ಸಿದ್ದೇಶ್ವರ ಹಾಗೂ ಮಾಜಿ ಶಾಸಕ ಎಸ್. ವಿ. ರಾಮಚಂದ್ರ ದೀಪೋತ್ಸವವನ್ನು ಉದ್ಘಾಟಿಸುವರು. ಮಧ್ಯಾಹ್ನ 3 ಗಂಟೆಗೆ ಸುಮಂಗಲಿಯರ ದೀಪೋತ್ಸವದೊಂದಿಗೆ ಸ್ವಾಮಿಯ ಮೆರವಣಿಗೆ ಜರುಗಲಿದೆ.

ದಿನಾಂಕ 11ರ ಸೋಮವಾರ ಬೆಳಿಗ್ಗೆ 5 ರಿಂದ 6.30 ರವರೆಗೆ ಅಗ್ನಿಕುಂಡದ ಹರಕೆ ಅರ್ಪಿಸಲಾಗುವುದು. ನಂತರ 6.30ಕ್ಕೆ ಮಹಾ ಮಂಗಳಾರತಿ ಮತ್ತು ಬಾಳೆಮಂಟಪ ವಿಸರ್ಜನೆ ನೆರವೇರಲಿದೆ.

## ಹರಿಹರ: ನಗರಸಭೆ ಕಾಮಗಾರಿ ಪರಿಶೀಲನೆ



ಹರಿಹರ, ಡಿ.8- ನಗರಸಭೆ ವತಿಯಿಂದ 15 ನೇ ಹಣಕಾಸಿನ ಅಡಿಯಲ್ಲಿ 9, 13, 14, 22 ಮತ್ತು 23 ನೇ ವಾರ್ಡಿನಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಯ ಗುಣಮಟ್ಟವನ್ನು ಜಿಲ್ಲಾ ಯೋಜನಾಧಿಕಾರಿ ಮಹಾಂತೇಶ್ ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲನೆ ನಡೆಸಿದರು. ಕೆಲವು ಸಣ್ಣ ಪುಟ್ಟ ವ್ಯತ್ಯಾಸವನ್ನು ಆದಷ್ಟು ಬೇಗ ಸರಿಪಡಿಸುವಂತೆ ಪೌರಾಯುಕ್ತ ಐಗೂರು ಬಸವರಾಜ್ ಮತ್ತು ಎಇಇ ತಿಪ್ಪೇಸ್ವಾಮಿ ಅವರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ನಗರಸಭೆ ಇಂಜಿನಿಯರ್ ಮಂಜುಳಾ, ಗುತ್ತಿಗೆದಾರರಾದ ಸುಭಾಷ್, ಜಗದೀಶ್ ರಾಘವೇಂದ್ರ , ಹೆಚ್.ಎಲ್. ರಾಘವೇಂದ್ರ ಇತರರು ಹಾಜರಿದ್ದರು.

## ವಕ್ಫ್ ಕಾಯ್ದೆ ವಾಪಸ್‌ಗೆ ಖಾಸಗಿ ಮಸೂದೆ

**(1ನೇ ಪುಟದಿಂದ)** ಈ ಮಸೂದೆ ಯನ್ನು ವಿರೋಧಿಸಿದವು. ನಂತರ ಮಸೂದೆಯನ್ನು ಮತಕ್ಕೆ ಹಾಕಲಾಯಿತು. ಮಸೂದೆ ಸಲ್ಲಿಸುವುದರ ಪರವಾಗಿ 53 ಹಾಗೂ ವಿರುದ್ಧವಾಗಿ 32 ಸದಸ್ಯರು ಮತ ಚಲಾಯಿಸಿದರು. ನಂತರದಲ್ಲಿ ಯಾದವ್ ಸಲ್ಲಿಸಿರುವ ಮಸೂದೆಯ ಕುರಿತು ಚರ್ಚಿಸಲಾಗುವುದು.

# ಬುದ್ಧನ ಕಾಲದಿಂದಲೂ ಸ್ವಚ್ಛತೆಯ ಪರಿಕಲ್ಪನೆ

### ಜಿಗಳಿ : ಎನ್ನೆಸ್ಸೆಸ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ



ಮಲೇಬೆನ್ನೂರು, ಡಿ.8- ಸ್ವಚ್ಛತೆಯ ಪರಿಕಲ್ಪನೆ ಬುದ್ಧನ ಕಾಲದಿಂದಲೂ ನಡೆದುಕೊಂಡು ಬಂದಿದ್ದು, ಮಹಾತ್ಮ ಗಾಂಧೀಜಿ ಅವರು ಗ್ರಾಮ ಸ್ವರಾಜ್ಯದ ಮೂಲಕ ಹಳ್ಳಿಗಳ ಅಭಿವೃದ್ಧಿ ಬಯಸಿದ್ದರೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಿ. ವಾಮದೇವಪ್ಪ ಹೇಳಿದರು.

ಶುಕ್ರವಾರ ಜಿಗಳಿ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹರಿಹರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ 7 ದಿನಗಳ ಎನ್ನೆಸ್ಸೆಸ್ ಶಿಬಿರದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡ ಅವರು ರಾಷ್ಟ್ರಕವಿ ಕುವೆಂಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಸಮಾರೋಪ ಭಾಷಣ ಮಾಡಿದರು.

ವಿದ್ಯಾರ್ಥಿಗಳು ಪಠ್ಯಪುಸ್ತಕಗಳ ಜೊತೆಗೆ ಆದರ್ಶ ವ್ಯಕ್ತಿಗಳ ಚರಿತ್ರೆಯ ಪುಸ್ತಕಗಳನ್ನು ಓದಿ ಅವರ ಬಗ್ಗೆ ತಿಳಿದುಕೊಳ್ಳಬೇಕು. ಕನ್ನಡದ ಕವಿಗಳು ಜ್ಞಾನಪೀಠಪ್ರಶಸ್ತಿಗಳನ್ನುಪಡೆದುಕೊಂಡಿರುವುದನ್ನು ನೀವು ಸದಾ ನೆನಪಿನಲ್ಲಿಟ್ಟುಕೊಂಡು ನೀವು ಎಲ್ಲೇ ಇದ್ದರೂ ಕನ್ನಡ ನಿಮ್ಮ ಉಸಿರಾಗಿರಬೇಕೆಂದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿ, ಬಲಿಷ್ಠ ಭಾರತ ಕಟ್ಟುವ ನಿಟ್ಟಿನಲ್ಲಿ ಇಂದಿನ ಯುವ ಜನಾಂಗದ ಜವಾಬ್ದಾರಿ ಹೆಚ್ಚಿದೆ. ಮಂದಿರ, ಮಸೀದಿ ನಿರ್ಮಾಣದಿಂದ ಸುಭದ್ರ ದೇಶ ಕಟ್ಟಲು ಸಾಧ್ಯವಿಲ್ಲ. ವಿದ್ಯಾರ್ಥಿಗಳು ಓದು ಮುಗಿಯುವವರೆಗೂ ದೇಶದಲ್ಲಿ ನಡೆಯುತ್ತಿರುವ ಇತರೆ ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳಬಾರದು.

ಲಯನ್ಸ್ ಮಾಜಿ ರಾಜ್ಯಪಾಲ ಡಾ. ಟಿ. ಬಸವರಾಜ್ ಮಾತನಾಡಿ, ಓದುವಾಗ ಮನಸ್ಸನ್ನು ಬೇರೆ ಕಡೆಗೆ ಹರಿಬಿಡಬೇಡಿ. ಒಳ್ಳೆಯ ಸ್ನೇಹಿತರ ಸಹವಾಸ ಮಾಡಿ, ಬದುಕಿನಲ್ಲಿ ನೀವು ಗೆದ್ದರೆ ನಿಮ್ಮ ಕುಟುಂಬ ಮತ್ತು ನಿಮ್ಮ ಊರು, ರಾಜ್ಯ, ದೇಶವನ್ನು ಗೆಲ್ಲಬಹುದೆಂದರು.

**ಮಂದಿರ, ಮಸೀದಿ ಕಟ್ಟುವುದರಿಂದ ದೇಶ ಸದೃಢ ಆಗಲ್ಲ, ಸದೃಢ ಮನಸ್ಸುಗಳನ್ನು ಬೆಳೆಸಬೇಕು : ಚಂದ್ರಶೇಖರ್ ಪೂಜಾರ್ ಅಭಿಮತ**

ಅರವಳಿಕೆ ತಜ್ಞ ಡಾ. ಎನ್.ಆರ್. ದಿನೇಶ್‌ಕುಮಾರ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಮಾನಸಿಕ ಧೈರ್ಯತೆ ಕಡಿಮೆ ಆಗುತ್ತಿದ್ದು, ಪರೀಕ್ಷೆಯಲ್ಲಿ ಫೇಲಾದ ತಕ್ಷಣ ಕೆಲವರು ಆತ್ಮಹತ್ಯೆ ಮಾಡಿಕೊಳ್ಳುವ ನಿರ್ಧಾರಕ್ಕೆ ಕೈಹಾಕುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಹೊರಬರಬೇಕು. ಮನಸ್ಸನ್ನು ಸದೃಢವಾಗಿಸಿಕೊಂಡರೆ ಮಾತ್ರ ನೀವು ಸದೃಢ ದೇಶ ಕಟ್ಟಲು ಸಾಧ್ಯ ಎಂದರು.

ಉಪತಹಶೀಲ್ದಾರ್ ಆರ್. ರವಿ ಮಾತನಾಡಿ, ಸ್ವಚ್ಛತೆ ಇದ್ದಲ್ಲಿ ಆರೋಗ್ಯ ಇರುತ್ತದೆ ಎಂಬುದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು. ರಸ್ತೆಯ ಮೇಲೆ ರೈತರು ಕೇಜ್‌ವ್ಹೀಲ್ ಹಾಕಿ ಟ್ರ್ಯಾಕ್ಟರ್ ಓಡಿಸಬೇಡಿ ಎಂದು ಮನವಿ ಮಾಡಿದರು.

ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಹರಿಹರ ತಾಲ್ಲೂಕು ಕಸಾಪ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಹರಿಹರ ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶರಣ್‌ಕುಮಾರ್ ಹೆಗಡೆ, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಡಾ. ಎನ್. ನಾಗರಾಜ್ ಮಾತನಾಡಿದರು.

ಶಿಬಿರದ ಕಾರ್ಯಕ್ರಮಾಧಿಕಾರಿ ಡಾ. ಬಿ.ಕೆ. ಮಂಜುನಾಥ್ ಪ್ರಾಸ್ತಾವಿಕ ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ಹೆಚ್. ವಿರೂಪಾಕ್ಷಪ್ಪ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಗ್ರಾ.ಪಂ. ಮಾಜಿ ಅಧ್ಯಕ್ಷ ಎಂ.ವಿ. ನಾಗರಾಜ್, ಎಸ್‌ಡಿಎಂಸಿ ಅಧ್ಯಕ್ಷ ಬಿ. ಪ್ರಭಾಕರ್, ಉಪಾಧ್ಯಕ್ಷೆ ರೇಣುಕಮ್ಮ ನಿಂಗಪ್ಪ, ಎಸ್‌ಡಿಎಂಸಿ ಸದಸ್ಯರಾದ ಶ್ರೀಮತಿ ಸುನೀತಾ ನಾಗರಾಜ್, ಶ್ರೀಮತಿ ರತ್ನಮ್ಮ ಬಸವರಾಜ್, ಕೆ.ಎಸ್. ಮಾಲತೇಶ್, ಶ್ರೀಮತಿ ಮಂಜುಳ ಮಾಲತೇಶ್, ವಿಜಯಭಾಸ್ಕರ್, ತೆಲಗಿ ನಾಗರಾಜ್, ಡಿ.ಪಿ. ಚಿದಾನಂದ್, ರೈತ ಸಂಘದ ಬೆಣ್ಣೇರ ನಂದ್ಯೆಪ್ಪ, ಶಿಕ್ಷಕರಾದ ಮಲ್ಲಿಕಾರ್ಜುನ್, ಗುಡ್ಡಪ್ಪ, ಶ್ರೀನಿವಾಸ್ ರೆಡ್ಡಿ ಭಾಗವಹಿಸಿದ್ದರು.

ಕಲಾವಿದರಾದ ಜಿಗಳಿಯ ಡಿ. ರಂಗನಾಥ್, ಬಿ. ಉಮೇಶ್, ಕೆ.ಎನ್. ಅಣ್ಣಪ್ಪ, ಸಿರಿಗೆರೆಯ ಎಂ. ಶಿವಕುಮಾರ್, ಕುಂದೂರು ಮಂಜಪ್ಪ ಅವರು ರೈತ ಹಾಗೂ ಕ್ರಾಂತಿ ಗೀತೆ ಹಾಡಿದರು.

ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ.ಪಿ. ಹನುಮಗೌಡ ಸ್ವಾಗತಿಸಿದರು. 'ಜನತಾವಾಣಿ' ಹಿರಿಯ ವರದಿಗಾರ ಜಿಗಳಿ ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರೆ, ಶಿಬಿರದ ಕಾರ್ಯಕ್ರಮಾಧಿಕಾರಿ ಡಾ. ಸಿ. ಚಂದ್ರಶೇಖರ್ ವಂದಿಸಿದರು.

## ಹಿರಿಯ ನಟಿ ಲೀಲಾವತಿ ಇನ್ನಿಲ್ಲ

**(1ನೇ ಪುಟದಿಂದ)** ಅಲಂಕರಿಸಿದವರು. ಅವರ ವೈವಿಧ್ಯಮಯ ಪಾತ್ರಗಳು ಮತ್ತು ಅದ್ಭುತ ಪ್ರತಿಭೆಯನ್ನು ಸದಾ ಸ್ಮರಿಸಲಾಗುತ್ತದೆ ಮತ್ತು ಪ್ರಶಂಸಿಸಲಾಗುತ್ತದೆ. ಅವರ ಕುಟುಂಬ ಮತ್ತು ಅಭಿಮಾನಿಗಳಿಗೆ ನನ್ನ ಸಂತಾಪಗಳು ಎಂದು ಪ್ರಧಾನಿ ಮೋದಿ ಸಂತಾಪ ವ್ಯಕ್ತಪಡಿಸಿದ್ದಾರೆ.

ಕನ್ನಡ ಚಿತ್ರರಂಗದ ಹಿರಿಯ ನಟಿ ಲೀಲಾವತಿ ಅವರ ಅಗಲಿಕೆಯ ಸುದ್ದಿ ನೋವುಂಟುಮಾಡಿದೆ. ಹಲವು ದಶಕಗಳ ಕಾಲ ತಮ್ಮ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರನ್ನು ರಂಜಿಸಿದ್ದ ಲೀಲಾವತಿ ಅವರು ಗುಣಮುಖರಾಗಿ ಇನ್ನಷ್ಟು ಕಾಲ ನಮ್ಮ ನಡುವೆ ಇರುತ್ತಾರೆಂಬ ನನ್ನ ನಂಬಿಕೆ ಹುಸಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

ಲೀಲಾವತಿ ಅವರು ಮಹಾಲಿಂಗ ಭಾಗವತರ ಶ್ರೀ ಸತ್ಯ ಸಾಮ್ರಾಜ್ಯ ನಾಟಕದ ಕಂಪನಿಯನ್ನು ಅವರು ಚಿಕ್ಕ ವಯಸ್ಸಿನಲ್ಲೇ ಸೇರಿಕೊಂಡಿದ್ದರು. 1958ರಲ್ಲಿ ಸುಬ್ಬಯ್ಯನಾಯ್ಡು ಅವರ 'ಭಕ್ತ ಪ್ರಹ್ಲಾದ' ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. 'ರಾಣಿ ಹೊನ್ನಮ್ಮ' ಪೂರ್ಣ ಪ್ರಮಾಣದ ನಾಯಕಿಯಾಗಿ ಅವರು ಗಮನ ಸೆಳೆದ ಮೊದಲ ಚಿತ್ರ. 'ರಣಧೀರ ಕಂಠೀರವ' ಅವರಿಗೆ ಹೆಸರು ತಂದುಕೊಟ್ಟ ಚಿತ್ರ.

ಲೀಲಾವತಿ ಅವರ ಮೂಲ ಹೆಸರು ಲೀಲಾ ಕಿರಣ್. 1958 ರಲ್ಲಿ ತೆರೆಕಂಡಿದ್ದ 'ಭಕ್ತ ಪ್ರಹ್ಲಾದ' ಅವರ ಮೊದಲ ಚಿತ್ರ. 2009ರಲ್ಲಿ ಬಿಡುಗಡೆಯಾಗಿದ್ದ 'ಯಾರದು?' ಅವರ ಕೊನೆಯ ಚಿತ್ರ.

ಪೋಷಕ ಪಾತ್ರಗಳಲ್ಲೂ ಲೀಲಾವತಿ ಅವರು ಮನೋಜ್ಞವಾಗಿ ಅಭಿನಯಿಸಿದ್ದರು. ಪೋಷಕ ಪಾತ್ರಗಳಲ್ಲಿ ಸುದೀರ್ಘ ಕಾಲ ಅವರು ಚಿತ್ರರಂಗದಲ್ಲಿ ಸೇವೆ ಸಲ್ಲಿಸಿದ್ದರು.

'ಡಾಕ್ಟರ್ ಕೃಷ್ಣ' ಸಿನಿಮಾದ ಪೋಷಕ ಪಾತ್ರಕ್ಕೆ ರಾಜ್ಯ ಪ್ರಶಸ್ತಿಯೂ ಸಂದಿತ್ತು. ನಟನೆಯ ಜೊತೆಗೆ ಅವರು ಕನ್ನಡದ ಕೆಲ ಚಿತ್ರಗಳನ್ನೂ ನಿರ್ಮಿಸಿದ್ದರು.

## ಎರಡು ತಿಂಗಳಲ್ಲಿ ಪರಿಹಾರ

**(1ನೇ ಪುಟದಿಂದ)** ರಚಿಸಲಾಗಿದೆ. ಈಗಾಗಲೇ ಎರಡು ಸಭೆಗಳಾಗಿದ್ದು, ಮುಂದಿನ ಏಳೆಂಟು ದಿನಗಳಲ್ಲಿ ಮೂರನೇ ಸಭೆ ನಡೆಯಲಿದೆ, ಅಲ್ಲಿ ಸೂಕ್ತ ತೀರ್ಮಾನ ತೆಗೆದುಕೊಂಡು ಬಿಬಿಎಂಪಿಯ ಮಾದರಿಯಲ್ಲಿ ಬಿ ಖಾತಾಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಈ ಹಿಂದೆ ಹಳೆಯ ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಯೋಜಿತ ನಕ್ಷೆಗಳಿರುವುದಿಲ್ಲ. ಫಾರಂ-ಸಿ ನೀಡಲು ಯೋಜಿತ ನಕ್ಷೆ, ನಿರಾಪೇಕ್ಷಣಾ ಪತ್ರ ಸೇರಿದಂತೆ, ಹಲವು ಷರತ್ತುಗಳನ್ನು ವಿಧಿಸಲಾಗಿದೆ. ಅವುಗಳು ಲಭ್ಯವಿಲ್ಲದ ಕಾರಣ ಸಮಸ್ಯೆ ಹೆಚ್ಚಾಗಿದೆ ಎಂದರು.

ಶೀಘ್ರದಲ್ಲೇ ನಿರ್ಧಾರ ತೆಗೆದುಕೊಂಡು 2 ತಿಂಗಳೊಳಗಾಗಿ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಭರವಸೆ ನೀಡಿದರು.

# ಸಾಲ ಮರುಪಾವತಿ ತಡೆ ಹಿಡಿಯಲು ಆಗ್ರಹ

ಜಗಳೂರು, ಡಿ. 8 - ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಮೈಕ್ರೋ ಫೈನಾನ್ಸ್‌ಗಳು ಸಾಲ ಮರುಪಾವತಿಗೆ ರೈತರಿಗೆ ನೀಡುತ್ತಿರುವ ನೋಟೀಸ್ ತಡೆ ಹಿಡಿಯುವಂತೆ ನೋಟೀಸ್ ಗಳಿಗೆ ಬೆಂಕಿ ಹಚ್ಚಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದಿಂದ ಪ್ರತಿಭಟನೆ ನಡೆಸಲಾಯಿತು.



ಪಟ್ಟಣದ ತಾಲ್ಲೂಕು ಕಛೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಬ್ಯಾಂಕ್ ಹಾಗೂ ಫೈನಾನ್ಸ್ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿ, ನಂತರ ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ ಅವರಿಗೆ ಲಿಖಿತ ಮನವಿ ಸಲ್ಲಿಸಿದರು.

ರಾಜ್ಯಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ಮಾತನಾಡಿ, ತಾಲ್ಲೂಕಿನಲ್ಲಿ ಬರ ಆವರಿಸಿ ಬೆಳೆದ ಬೆಳೆಗಳು ಕೈಗೆಟಕುದೇ ರೈತರು ಆರ್ಥಿಕ ಸಂಕಷ್ಟದಲ್ಲಿದ್ದಾರೆ.ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾಲ ಮರು ಪಾವತಿಗೆ ಕಾಲಾವಕಾಶ ನೀಡದೆ ರಾಷ್ಟ್ರೀಕೃತ ಬ್ಯಾಂಕುಗಳು ಹಾಗೂ ಫೈನಾನ್ಸ್ ಕಂಪನಿಗಳು ನೋಟಿಸ್ ಜಾರಿಗೊಳಿಸಿ, ಸಾಲ ಮರುಪಾವತಿಗೆ ಬಲವಂತದಿಂದ ವಸೂಲಾತಿ ಕಿರುಕುಳ ನೀಡುತ್ತಿದ್ದಾರೆ ಆರೋಪಿಸಿದರು.

ರೈತ ಕಾರ್ಮಿಕರ ಖಾತೆಗೆ ಸಾಮಾಜಿಕ ಭದ್ರತೆಯಡಿ ಸರ್ಕಾರ ಜಮಾ ಮಾಡುವ ಹಣವನ್ನು ಕೂಡಲೇ ಸಾಲ ಮರುಪಾವತಿಗೆ ಜಮಾ ಮಾಡಬಾರದು ಎಂದು ಆಗ್ರಹಿಸಿದರು.

**ಜಗಳೂರಿನಲ್ಲಿ ರೈತರ ಪ್ರತಿಭಟನೆ**

ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ ಮನವಿ ಸ್ವೀಕರಿಸಿ ಮಾತನಾಡಿ, ಮುಂದಿನ ಸೋಮವಾರ ತಾಲ್ಲೂಕಿನ ಎಲ್ಲಾ ಮೈಕ್ರೋ ಫೈನಾನ್ಸ್ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳ ವ್ಯವಸ್ಥಾಪಕರನ್ನು ರೈತ ಸಂಘಟನೆ ಸಮ್ಮುಖದಲ್ಲಿ ಸಭೆ ಕರೆದು ಚರ್ಚೆ ನಡೆಸಿ ರೈತರ ಸಾಲ ಮರುಪಾವತಿಗೆ ಕಾಲಾವಕಾಶ ನೀಡಲು ತೀರ್ಮಾನಿಸಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸಂಘಟನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿರಂಜೀವಿ, ಪದಾಧಿಕಾರಿಗಳಾದ ಸತೀಶ್, ಸಹದೇವರೆಡ್ಡಿ, ತಿಪ್ಪೇಸ್ವಾಮಿ, ಅಂಜಿನಪ್ಪ, ತಿಪ್ಪಣ್ಣ, ಸಣ್ಣಪಾಲಯ್ಯ, ತಿಪ್ಪೇಶ್, ರೆಡ್ಡಿ, ಅಶೋಕ ಮುಂತಾದವರು ಭಾಗವಹಿಸಿದ್ದರು.

# ಕುಲಶಾಸ್ತ್ರೀಯ ಅಧ್ಯಯನ ಕುರಿತು ನಾಳೆ ಸಂವಾದ

ದಾವಣಗೆರೆ, ಡಿ. 8- ಅಖಿಲ ಭಾರತ ವಿಶ್ವಕರ್ಮ ಪರಿಷತ್ತು, ಸಮಾಜದ ಮತ್ತು ಸಂಘ-ಸಂಸ್ಥೆಗಳು, ಲಯನ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 10 ರ ಭಾನುವಾರ ಬೆಳಿಗ್ಗೆ 11ಕ್ಕೆ ಚನ್ನಗಿರಿ ತಾಲ್ಲೂಕು ವಡ್ನಾಳು ಗ್ರಾಮದ ಕಾಶಿಮಠದಲ್ಲಿ ಕುಲಶಾಸ್ತ್ರೀಯ ಅಧ್ಯಯನ ಕುರಿತು ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀ ಶಂಕರಾತ್ಮಾನಂದ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿಶ್ವಕರ್ಮ ಸಮಾಜದ ಇತಿಹಾಸದ ಬಗ್ಗೆ ಅಧ್ಯಯನವನ್ನು ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ನಡೆಸಲಾಗುತ್ತಿದ್ದು, ಅನೇಕ ತಜ್ಞರ ತಂಡಗಳು ಆಗಮಿಸಲಿವೆ. ಈಗಾಗಲೇ ರಾಜ್ಯದ 22 ಜಿಲ್ಲೆಗಳಲ್ಲಿ ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ದಾವಣಗೆರೆ ಜಿಲ್ಲೆಯಲ್ಲೂ ವಿಶ್ವಕರ್ಮ ಸಮಾಜದ ಪರಂಪರೆ, ಇತಿಹಾಸ, ಇಲ್ಲಿನ ಜನರ ಜೀವನ ನಿರ್ವಹಣೆ, ಬಳಸುವ ಭಾಷೆ, ಆಚಾರ, ವಿಚಾರ, ದೇವತಾರಾಧನೆ ಒಳಗೊಂಡಂತೆ ಸಂಪೂರ್ಣವಾದ ಅಧ್ಯಯನ ನಡೆಸಲು ಈ ಕಾರ್ಯಕ್ರಮವನ್ನು ಸರ್ಕಾರದಿಂದಲೇ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಸಂವಾದ ಕಾರ್ಯಕ್ರಮದಲ್ಲಿ ಮೈಸೂರು ವಿವಿಯ ಡಾ. ಡಿ.ಸಿ. ನಂಜುಂಡ, ಡಾ. ಮಹಾದೇವ್, ಡಾ. ಕೃಷ್ಣಮೂರ್ತಿ ಮತ್ತಿತರರು ಪಾಲ್ಗೊಳ್ಳುವರು. ಅಖಿಲ ಭಾರತ ವಿಶ್ವಕರ್ಮ ಪರಿಷತ್ತು ಅಧ್ಯಕ್ಷ ಎಂ.ಇ. ಮೌನೇಶ್ವರಚಾರಿ ಅಧ್ಯಕ್ಷತೆ ವಹಿಸಲಿದ್ದಾರೆ. ಕೆ. ಕಾಳಾಚಾರ್, ಎಸ್. ತಿಪ್ಪೇಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆಂದು ತಿಳಿಸಿದರು.

ಪ್ರಸ್ತುತ ವಿಶ್ವಕರ್ಮ ಸಮಾಜದ ಪ್ರವರ್ಗ 2 ಎ ಮೀಸಲಾತಿಯನ್ನು ಹೊಂದಿದೆ. ಬೇರೆ ಪಂಗಡಕ್ಕೆ ಸೇರಿಸಬೇಕೆಂಬ ಒತ್ತಾಯ ಕೂಡ ನಮ್ಮದಲ್ಲ. ಪ್ರವರ್ಗ 2 ಎ ಒಳ ಮೀಸಲಾತಿ ನೀಡಬೇಕೆಂದರು.

ಮುಂದಿನ ದಿನಗಳಲ್ಲಿ ಮೀಸಲಾತಿ, ಅನುದಾನ, ಯೋಜನೆ, ಕಾರ್ಯಕ್ರಮ ರೂಪಿಸಲು ಅನುಕೂಲವಾಗುವ ಹಾಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಲಾಗುತ್ತಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಅನುಮತಿ ನೀಡಿತ್ತು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಎಂ.ಇ. ಮೌನೇಶ್ವರಚಾರ್, ಕಾಡಜ್ಜಿ ಕಾಳಾಚಾರ್, ಬಾವಿಹಾಳ್ ನಾಗರಾಜಚಾರ್, ಷಣ್ಮುಖಚಾರ್ ಮತ್ತಿತರರಿದ್ದರು.

## ರಾಣೇಬೆನ್ನೂರು ನಗರಸಭೆ ಉಪಚುನಾವಣೆ

ರಾಣೇಬೆನ್ನೂರು, ಡಿ. 8 - ಸದಸ್ಯೆಯ ಆತ್ಮಹತ್ಯೆಯಿಂದ ತೆರವಾದ ಇಲ್ಲಿನ ನಗರಸಭೆಯ 22ನೇ ವಿಭಾಗದ ಚುನಾವಣೆಗೆ ವೇಳಾಪಟ್ಟಿ ಪ್ರಕಟವಾಗಿದ್ದು, ಇಂದಿನಿಂದ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭಗೊಂಡಿದೆ.

ಇದೇ ದಿನಾಂಕ 15 ನಾಮಪತ್ರ ಸಲ್ಲಿಸಲು ಕೊನೆಯ ದಿನ, 16 ನಾಮಪತ್ರ ಪರೀಶೀಲನೆ, 18 ಮರಳಿ ಪಡೆಯಲು ಕೊನೆ ದಿನ, 27 ಮತದಾನ ನಂತರ ಎಣಿಕೆ ನಡೆಯಲಿದೆ ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

## ಪರಿಶಿಷ್ಟರ ಅನುದಾನ ದುರ್ಬಳಕೆಗೆ ಅವಕಾಶವಿಲ್ಲ : ಮಹಾದೇವಪ್ಪ

**(1ನೇ ಪುಟದಿಂದ)** ಯೋಜನೆಯಡಿ ಗ್ಯಾರಂಟಿ ಯೋಜನೆಗಳಿಗಾಗಿ, ಗೃಹಲಕ್ಷ್ಮಿ ಯೋಜನೆಗೆ 5075 ಕೋಟಿ ರೂ, ಅನ್ನಭಾಗ್ಯ ಯೋಜನೆಗೆ 2779.50 ಕೋಟಿ ರೂ, ಗೃಹಜ್ಯೋತಿ ಯೋಜನೆಯಡಿ 2410 ಕೋಟಿ ರೂ, ಶಕ್ತಿ ಯೋಜನೆಗೆ 812 ಕೋಟಿ ರೂ, ಯುವನಿಧಿ ಯೋಜನೆಗೆ 67.50 ಕೋಟಿ ರೂ. ಒದಗಿಸಲಾಗಿದ್ದು, ಈ ಮೊತ್ತವನ್ನು ಪರಿಶಿಷ್ಟ ಜಾತಿ/ಪಂಗಡದವರಿಗೆ ಉಪಯೋಗಿಸುತ್ತಿರುವುದರಿಂದ ಸದರಿ ಅನುದಾನದ ದುರ್ಬಳಕೆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಿಳಿಸಿದರು.

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನದಲ್ಲಿ ದುರ್ಬಳಕೆ ತಡೆಯುವ ಉದ್ದೇಶದಿಂದಲೇ ಕಾಯ್ದೆಯ ಸೆಕ್ಷನ್ 7 (ಡಿ) ಯನ್ನು ಕೈಬಿಡಲು ನಿನ್ನೆ ನಡೆದ ಕ್ಯಾಬಿನೆಟ್ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಸಚಿವರು ತಿಳಿಸಿದರು.

## ಚನ್ನಗಿರಿ ಪುರಸಭೆ ಉಪಚುನಾವಣೆ

ಚನ್ನಗಿರಿ,ಡಿ.8- ಚನ್ನಗಿರಿ ಪುರಸಭೆ ವ್ಯಾಪ್ತಿಯ ಸಿಹಿನೀರು ಬಾವಿ ರಸ್ತೆ ಬಡಾವಣೆ ವಾರ್ಡ್ ಸಂಖ್ಯೆ-14 ರಲ್ಲಿ ಅಸ್ಲಾಂ ಬೇಗ್ ಬಿನ್ ಶೇರುಬೇಗ್ ಅವರ ಮರಣದಿಂದ ತೆರವಾಗಿರುವ ಸದಸ್ಯ ಸ್ಥಾನವನ್ನು ತುಂಬಲು ಉಪಚುನಾವಣೆ ಘೋಷಿಸಲಾಗಿದೆ. ನಾಮಪತ್ರ ಸಲ್ಲಿಸಲು ಡಿ.15 ಕೊನೆಯ ದಿನ. ಡಿ.16 ನಾಮಪತ್ರಗಳ ಪರಿಶೀಲನೆ. ಡಿ. 18 ಉಮೇದುವಾರಿಕೆಗಳನ್ನು ಹಿಂಪಡೆಯಲು ಕೊನೆಯ ದಿನ. ಮತದಾನವು ಡಿ. 27 ರಂದು ನಡೆಯಲಿದೆ.

## ಅಪರಿಚಿತ ವ್ಯಕ್ತಿ ಶವ ಪತ್ತೆ



ದಾವಣಗೆರೆ,ಡಿ.8- ಕುಂದಾಪುರ ತಾಲ್ಲೂಕಿನ ಸಿದ್ದಾಪುರದಲ್ಲಿ ವ್ಯಕ್ತಿಯೋರ್ವ ತೀವ್ರ ಹೃದಯಾಘಾತದಿಂದ ಮೃತಪಟ್ಟಿದ್ದು, ಈತನ ಬಳಿ ದೊರೆತಿರುವ ಕವರ್‌ನಲ್ಲಿ ದಾವಣಗೆರೆಯವನೆಂದು ತಿಳಿಸಲಾಗಿದೆ.

**ಕೊಡಗನೂರು ಶ್ರೀಮತಿ ಸರೋಜಮ್ಮ ನಿಧನ**



ದಾವಣಗೆರೆ ಎಂ.ಸಿ.ಸಿ. 'ಬಿ' ಬ್ಲಾಕ್, 10ನೇ ಕ್ರಾಸ್ ವಾಸಿ, ಕೊಡಗನೂರು ದಿ|| ಸಾಹುಕಾರ್ ಮಾಗಾನಹಳ್ಳಿ ಷಣ್ಮುಖ ಸ್ವಾಮಿ, ನಿವೃತ್ತ ಮುಖ್ಯ ಪ್ರಾಧ್ಯಾಪಕರು, ಶ್ರೀ ಮುರುಘ ರಾಜೇಂದ್ರ ಪ್ರೌಢ ಶಾಲೆ, ವಿನೋಬನಗರ, ದಾವಣಗೆರೆ. ಇವರ ಪತ್ನಿ

**ಶ್ರೀಮತಿ ಸರೋಜಮ್ಮ**

ಇವರು, ದಿನಾಂಕ : 08.12.2023ರ ಶುಕ್ರವಾರ ಮಧ್ಯಾಹ್ನ 11.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 84 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ : 09.12.2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಕೊಡಗನೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗದವರು :**

ಮಾಗಾನಹಳ್ಳಿ ಎಸ್. ಉದಯಾದಿತ್ಯ ಮತ್ತು ಸಹೋದರರು ಮತ್ತು ಮಕ್ಕಳು, ಕೊಡಗನೂರು, ಬಂಧು-ಮಿತ್ರರು, 70199 77125, 77956 74154

## ವ್ಯಾಸಂಗ ಪಡೆದು, ಪ್ರಜೆಗಳಾಗಿರಿ

**(1ನೇ ಪುಟದಿಂದ)** ಮಕ್ಕಳಲ್ಲಿರುವ ಸೃಜನಶೀಲತೆಯನ್ನು ತೋರ್ಪಡಿಸುವಂತಹ ವಿಶೇಷ ಕಾರ್ಯಕ್ರಮ ಇದಾಗಿದೆ ಎಂದರು. ನೃತ್ಯ ಪ್ರದರ್ಶನ: ವಿವಿಧ ಶಾಲಾ ವಿದ್ಯಾರ್ಥಿಗಳಿಂದ ನೃತ್ಯ, ಗಾಯನ ಹಾಗೂ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಜಿಲ್ಲಾ ಬಾಲಭವನದಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು ವಿಜೇತರಿಗೆ ಪ್ರಮಾಣ ಪತ್ರ ಹಾಗೂ ಬಹುಮಾನ ವಿತರಿಸಲಾಯಿತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪ ನಿರ್ದೇಶಕ ಕೊಟ್ರೇಶ್ ಜಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಜಿಲ್ಲಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಭಿಕುಮಾರ್ ಉಪಸ್ಥಿತರಿದ್ದರು.

## ಮೋಡ ಬಿತ್ತನೆಗೆ ಒಲವು

**(1ನೇ ಪುಟದಿಂದ)** ನೆರವು ನೀಡಬಹುದೆಂಬುದನ್ನು ಪರಿಶೀಲಿಸುತ್ತೇನೆ ಎಂದು ಭರವಸೆ ನೀಡಿದರು. ಮೋಡ ಬಿತ್ತನೆಯನ್ನು ಈಗಾಗಲೇ ಹಲವು ರಾಜ್ಯಗಳು ಜಾರಿಗೊಳಿಸಿವೆ. ರಾಜ್ಯದಲ್ಲಿ ಇಂದಿನಿಂದ ನಾಲ್ಕು ದಿನಗಳ ಕಾಲ ಕಾಣಸಿಗುವ ಮೋಡಗಳ ಸದ್ಬಳಕೆಗಾಗಿ ಪ್ರಯತ್ನಿಸು ವುದಾಗಿ ಭರವಸೆ ನೀಡಿದರು. ಪ್ರಕಾಶ್ ಕೋಳಿವಾಡ ಮಾತನಾಡಿ, ಒಂದು ವೇಳೆ ಸರ್ಕಾರಕ್ಕೆ ನಿರ್ಧಾರ ತೆಗೆದುಕೊಳ್ಳಲು ವಿಳಂಬವಾಗುವುದಾದರೆ, ಚಿಂತೆ ಇಲ್ಲ. ನನ್ನ ಸ್ವಂತ ಖರ್ಚಿನಲ್ಲೇ ಮೋಡ ಬಿತ್ತನೆ ಮಾಡಿಸುತ್ತೇನೆ. ಮುಖ್ಯಕಾರ್ಯದರ್ಶಿಯವರಿಂದ ಅನುಮತಿ ಕೊಡಿಸಿ ಎಂದು ಮನವಿ ಮಾಡಿದರು.

# ಬೀರೂರು-ಸಮ್ಮಸಗಿ ರಸ್ತೆ ದುರಸ್ತಿಗೆ ಆಗ್ರಹಿಸಿ ಕರೆದಿದ್ದ ಹರಿಹರ ಬಂದ್‌ಗೆ ಮಿಶ್ರ ಪ್ರತಿಕ್ರಿಯೆ

ಹರಿಹರ, ಡಿ.8- ನಗರದಲ್ಲಿ ತುಂಗಭದ್ರಾ ನದಿಯ ಹತ್ತಿರದ ಬೀರೂರು -ಸಮ್ಮಸಗಿ ರಸ್ತೆ ದುರಸ್ತಿ ಪಡಿಸುವಂತೆ ಆಗ್ರಹಿಸಿ ವಿವಿಧ ಸಂಘಟನೆಗಳು ಕರೆದಿದ್ದ ಬಂದ್ ಕರೆಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.




ಜಯಕರ್ನಾಟಕ ಸಂಘಟನೆ, ವಿವಿಧ ಕನ್ನಡ ರಕ್ಷಣಾ ವೇದಿಕೆಯ ಸಂಘಟನೆಗಳು, ಡಿ.ಎಸ್.ಎಸ್. ಸಂಘಟನೆಗಳು ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಸೇರಿದಂತೆ, ಹಲವು ಸಂಘಟನೆಯವರು ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿಸುತ್ತಾ ವ್ಯಾಪಾರಸ್ಥರಿಗೆ ಸಹಕರಿಸಲು ಮನವಿ ಮಾಡಿದರು. ಸಂಘಟಕರ ಮನವಿ ತಿರಸ್ಕರಿಸಿದೆ ವ್ಯಾಪಾರಸ್ಥರು ಸ್ವಯಂ ಪ್ರೇರಣೆಯಿಂದ ತಮ್ಮ ತಮ್ಮ ಅಂಗಡಿ ಮುಂಗಟ್ಟನ್ನು ಬಂದ್ ಮಾಡಿದರು. ತದನಂತರ ಅವರು ಮುಂದೆ ಹೋದಂತೆ ಇತ್ತ ಪುನಃ ಮಧ್ಯಾಹ್ನ ಅಂಗಡಿ ಮುಗ್ಗಟ್ಟನ್ನು ತೆರೆದುಕೊಂಡು ವ್ಯಾಪಾರ ವಹಿವಾಟು ನಡೆಸಿದರು.

ಆಟೋ, ಬಸ್, ಬ್ಯಾಂಕ್, ಪೆಟ್ರೋಲ್ ಬಂಕ್, ಮೆಡಿಕಲ್ ಷಾಪ್, ತರಕಾರಿ, ಹೋಟೆಲ್, ಹೂವು, ಹಣ್ಣು ಗೊಬ್ಬರ ಸೇರಿದಂತೆ ಇತರೆ ವ್ಯಾಪಾರ ವಹಿವಾಟು ಎಂದಿನಂತೆ ಇದ್ದವು. ಬೇಕರಿ, ಬಟ್ಟೆ, ಹಾರ್ಡ್‌ವೇರ್, ಸಿಮೆಂಟ್ ಕಬ್ಬಿಣ, ಮೊಬೈಲ್ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು.

ಮಧ್ಯಾಹ್ನ ಪಕ್ಕಿರಸ್ವಾಮಿ ಮಠದ ಮುಂಭಾಗದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ ರಾಣಿ ಚೆನ್ನಮ್ಮ ವೃತ್ತ, ಗಾಂಧಿ ವೃತ್ತದಲ್ಲಿ ಸಂಚರಿಸಿ, ತಹಶೀಲ್ದಾರ್ ಕಚೇರಿಗೆ ತೆರಳಿ ರಸ್ತೆಯನ್ನು ಶೀಘ್ರವೇ ದುರಸ್ತಿ ಪಡಿಸಿ ಸಾರ್ವಜನಿಕರನ್ನು ಆಗುತ್ತಿರುವ ತೊಂದರೆಗಳಿಂದ ವಿಮುಕ್ತಿಗೊಳಿಸುವಂತೆ ಸಂಘಟನೆ ಮುಖಂಡರು ಮನವಿ ಮಾಡಿಕೊಂಡರು.

ಪಿಎಸ್‌ಐ ದೇವಾನಂದ್, ಚಿದಾನಂದ ಸಿಬ್ಬಂದಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರು.

ಈ ಸಂದರ್ಭದಲ್ಲಿ ಕಾರ್ಮಿಕ ಮುಖಂಡ ಹೆಚ್.ಕೆ. ಕೊಟ್ರಪ್ಪ, ಜಯಕರ್ನಾಟಕ ಸಂಘಟನೆ ಗೋವಿಂದ, ಆನಂದ್, ಮಂಜುನಾಥ್ ಶಬರೀಶ, ರಕ್ಷಣಾ ವೇದಿಕೆಯ ಶ್ರೀನಿವಾಸ್, ಬಿ.ಮುಗ್ದಂ, ಇಲಿಯಾಸ್ ಆಹ್ಮದ್, ಡಿ.ಎಸ್.ಎಸ್. ಮುಖಂಡರಾದ ಕೊಪ್ಪಳ ಮಂಜುನಾಥ್, ಕೊಟ್ರೇಶ್, ಹನುಮಂತಪ್ಪ, ಮಂಜುನಾಥ್, ಆಮ್ ಆದ್ಮಿ ಪಕ್ಷದ ಮಲ್ಲೇಶ್ ಹಾಗು ಇತರರು ಹಾಜರಿದ್ದರು.

## 'ಹಾನಿ ಪರಿಹಾರ'ಕ್ಕೆ ಮಾರ್ಗಸೂಚಿ

**(1ನೇ ಪುಟದಿಂದ)** 2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬರ ಪರಿಸ್ಥಿತಿಯಿಂದ ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೃಣಧಾನ್ಯಗಳು, ತೊಗರಿ, ಹೆಸರು, ಉದ್ದು, ಹುರುಳಿ, ಅವರೆ, ಅಲಸಂದೆ, ಕಡಲೆ, ಸಾಸಿವೆ, ಸೂರ್ಯಕಾಂತಿ.

ಸೋಯಾ ಅವರೆ, ಹತ್ತಿ,ಕಬ್ಬು ಹಾಗೂ ತಂಬಾಕು ಬೆಳೆಗಳು ಹಾಳಾಗಿವೆ. ಹಾನಿಯಾದ ಬೆಳೆ ಹಾನಿ ಪರಿಹಾರಕ್ಕಾಗಿ ಎನ್ ಡಿಆರ್ ಎಫ್ ನಿಯಮದಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದ್ದು, ಆರ್ಥಿಕ ನೆರವನ್ನು ನಿರೀಕ್ಷಿಸಲಾಗಿದೆ ಎಂದೂ ಅವರು ಸದನಕ್ಕೆ ತಿಳಿಸಿದರು.

## ಧ್ವನಿ ಎತ್ತಿದ ಶಾಸಕ ಬಸವಂತಪ್ಪ

**(1ನೇ ಪುಟದಿಂದ)** ಖರೀದಿ ಮಾಡಿ ರೈತರು ಮೋಸಕ್ಕೆ ಒಳಗಾಗುತ್ತಿದ್ದಾರೆ. ಇನ್ನೂ ಭದ್ರಾ ಡ್ಯಾಂನಲ್ಲಿರುವ ನೀರನ್ನು ತೋಟಗಾರಿಕಾ ಬೆಳೆಗೆ ಹರಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಿದರು.

ಪ್ರಮುಖವಾಗಿ ಆರೋಗ್ಯ ವಿಚಾರವಾಗಿ ಮಾತನಾಡಿದ ಶಾಸಕ ಕೆ. ಎಸ್.ಬಸವಂತಪ್ಪ, ಸರ್ಕಾರಿ ಆಸ್ಪತ್ರೆಗಳಲ್ಲಿ ಐಸಿಯು ಬೆಡ್ ಗಳನ್ನು ಹೆಚ್ಚಿಸಬೇಕು. ಜೊತೆಗೆ ನಮ್ಮ ಭಾಗದ ಶಾಲೆಗಳು, ಹಾಸ್ಟೆಲ್ ಗಳಿಗೆ ಸೌಲಭ್ಯಗಳನ್ನು ಕಲ್ಪಿಸಬೇಕು ಹಾಗು ರಸ್ತೆ ಅಭಿವೃದ್ಧಿ ಸೇರಿದಂತೆ ಮಾಯಕೊಂಡ ಕ್ಷೇತ್ರದಲ್ಲಿರುವ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

## ಅಪರಿಚಿತನ ವಾರಸುದಾರರ ಪತ್ತೆಗೆ ಕರೆ



ದಾವಣಗೆರೆ, ಡಿ. 8- ಸುಮಾರು 25 ವರ್ಷದ ಯುವಕನೊಬ್ಬ ತನ್ನ ಹೆಸರು ಮುರುಳಿ ತಂದೆ ಶೇಖರಪ್ಪ ಹದಡಿ ಗ್ರಾಮ ಎಂದು ಹೇಳಿಕೊಂಡು ಹೊಟ್ಟೆ ನೋವು, ಉಸಿರಾಟದ ತೊಂದರೆ ಇರುವುದಾಗಿ ಹೇಳಿ ಕಳೆದ 15 ದಿನಗಳ ಹಿಂದೆ ಸಿ.ಜಿ. ಆಸ್ಪತ್ರೆಗೆ ದಾಖಲಾಗಿದ್ದು ಕಳೆದ ವಾರ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾನೆ. ಸಂಬಂಧಪಟ್ಟವರು ಹದಡಿ ಪೊಲೀಸ್ ಠಾಣೆ (94808 03254, ಫೋ. 08192-218405) ಯನ್ನು ಸಂಪರ್ಕಿಸಬಹುದು.

KA/SK/CTA-275/2021-2023. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

## ಸಂಕ್ಷಿಪ್ತ ಸುದ್ದಿ

**ಸೆಣಬಿನ ನೀತಿಗೆ ಕೇಂದ್ರದ ಒಪ್ಪಿಗೆ**
ನವದೆಹಲಿ : 2023-24ರ ವರ್ಷಕ್ಕಾಗಿ ಕೇಂದ್ರ ಸರ್ಕಾರ ಸೆಣಬಿನ ನೀತಿಯನ್ನು ಅಂಗೀಕರಿಸಿದೆ. ಅದರ ಪ್ರಕಾರ ಶೇ.100ರಷ್ಟು ಆಹಾರ ಧಾನ್ಯಗಳಿಗೆ ಸೆಣಬಿನ ಚೀಲ ಬಳಸಬೇಕಿದೆ. ಶೇ.20ರಷ್ಟು ಸಕ್ಕರೆಗೆ ಸೆಣಬಿನ ಚೀಲದ ಬಳಕೆಯಾಗಬೇಕಿದೆ.

**ಬಡ್ಡಿ ದರ ಕಡಿತದ ಉದ್ದೇಶವಿಲ್ಲ : ಆರ್.ಬಿ.ಐ.**
ಮುಂಬೈ : ಬಡ್ಡಿ ದರಗಳನ್ನು ಕಡಿಮೆ ಮಾಡುವ ಯಾವುದೇ ಉದ್ದೇಶ ಇಲ್ಲ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ್ ದಾಸ್ ಹೇಳಿದ್ದಾರೆ. ಹಣದುಬ್ಬರ ನಿಯಂತ್ರಣ ಆದ್ಯತೆಯಾಗಿದೆ, ಕೆಲ ತಿಂಗಳು ಉತ್ತಮ ಬೆಳವಣಿಗೆಯಾಗಿದೆ ಎಂಬ ಮಾತ್ರಕ್ಕೆ ಉದಾಸೀನ ಮಾಡಲಾಗದು ಎಂದವರು ತಿಳಿಸಿದ್ದಾರೆ.

**ರಾಜ್ಯಪಾಲರ ನೇಮಕ ಪ್ರಕ್ರಿಯೆ ಬದಲಿಸಲು ಆಗ್ರಹ**
ನವದೆಹಲಿ : ರಾಜ್ಯಪಾಲರು ಹಾಗೂ ರಾಜ್ಯಗಳ ಚುನಾಯಿತ ಸರ್ಕಾರಗಳ ನಡುವಿನ ಸಂಘರ್ಷದಿಂದ ಆಡಳಿತದ ಮೇಲೆ ಪರಿಣಾಮವಾಗಿದೆ. ಇದರಿಂದ ಕೇಂದ್ರ ಹಾಗೂ ರಾಜ್ಯಗಳ ಸಂಬಂಧಗಳ ಮೇಲೆ ಪರಿಣಾಮವಾಗುತ್ತಿದೆ. ರಾಜ್ಯಪಾಲರ ನೇಮಕ ಪ್ರಕ್ರಿಯೆ ಬದಲಿಸಬೇಕು ಎಂದು ಪ್ರತಿಪಕ್ಷಗಳ ಸದಸ್ಯರು ರಾಜ್ಯಸಭೆಯಲ್ಲಿ ಒತ್ತಾಯಿಸಿದ್ದಾರೆ.

**ಮುಖ್ಯಮಂತ್ರಿಗಳ ಆಯ್ಕೆಗಾಗಿ ಬಿಜೆಪಿಯಿಂದ ವೀಕ್ಷಕರ ನೇಮಕ**
ನವದೆಹಲಿ : ರಾಜಸ್ಥಾನ, ಮಧ್ಯ ಪ್ರದೇಶ ಹಾಗೂ ಛತ್ತೀಸ್‌ಘಡ ರಾಜ್ಯಗಳ ಮುಖ್ಯಮಂತ್ರಿಗಳ ಆಯ್ಕೆಗಾಗಿ ಬಿಜೆಪಿ ಹೈಕಮಾಂಡ್ ವೀಕ್ಷಕರನ್ನು ನೇಮಿಸಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಾಜಸ್ಥಾನ, ಹರಿಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ಅವರು ಮಧ್ಯ ಪ್ರದೇಶ ಹಾಗೂ ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡ ಅವರು ಛತ್ತೀಸ್‌ಘಡಕ್ಕೆ ವೀಕ್ಷಕರಾಗಿ ತೆರಳಲಿದ್ದಾರೆ.

**ಛತ್ತೀಸ್‌ಘಡ, ಮಧ್ಯಪ್ರದೇಶದ ಸೋಲು ಅನಿರೀಕ್ಷಿತ : ಕಾಂಗ್ರೆಸ್**
ನವದೆಹಲಿ : ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯ ಫಲಿತಾಂಶದ ಕುರಿತು ಕಾಂಗ್ರೆಸ್ ನಾಯಕತ್ವ ಪ್ರತ್ಯೇಕ ಆತ್ಮಾವಲೋಕನ ಸಭೆಗಳನ್ನು ನಡೆಸಿದೆ. ಛತ್ತೀಸ್‌ಘಡ ಹಾಗೂ ಮಧ್ಯ ಪ್ರದೇಶದ ಸೋಲು ಅನಿರೀಕ್ಷಿತ ಹಾಗೂ ನಿರಾಶಾದಾಯಕ ಎಂದು ಕಾಂಗ್ರೆಸ್ ಹೇಳಿದೆ.

**ನಿಜ್ಜರ್ ಹತ್ಯೆ : ಕೆನಡಾ ನಿರ್ದಿಷ್ಟ ಮಾಹಿತಿ ನೀಡಿಲ್ಲ ಎಂದ ಕೇಂದ್ರ**
ನವದೆಹಲಿ : ಕೆನಡಾದಲ್ಲಿ ಖಲಿಸ್ತಾನಿ ಮುಖಂಡ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆ ಮಾಡಿರುವುದರಲ್ಲಿ ಭಾರತದ ಪಾತ್ರ ಇದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೆನಡಾ ಯಾವುದೇ ನಿರ್ದಿಷ್ಟ ಹಾಗೂ ಪ್ರಸ್ತುತವಾದ ಮಾಹಿತಿ ನೀಡಿಲ್ಲ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ತಿಳಿಸಿದೆ.

**ಹಮಾಸ್ - ಇಸ್ರೇಲ್ ಸಂಘರ್ಷ : ರಾಯಭಾರಿ ಮಾರ್ಗಕ್ಕೆ ಸಲಹೆ**
ನವದೆಹಲಿ : ಹಮಾಸ್ ಹಾಗೂ ಇಸ್ರೇಲ್ ನಡುವಿನ ಸಂಘರ್ಷದಲ್ಲಿ ಹದಗೆಡುತ್ತಿರುವ ಭದ್ರತಾ ಪರಿಸ್ಥಿತಿಯ ಬಗ್ಗೆ ಕಳವಳ ಇದೆ ಎಂದು ವಿದೇಶಾಂಗ ಸಚಿವ ಜೈಶಂಕರ್ ಹೇಳಿದ್ದಾರೆ. ಮಾತುಕತೆ ಹಾಗೂ ರಾಯಭಾರಿ ಮಾರ್ಗಗಳ ಮೂಲಕ ಪರಿಹಾರ ಕಂಡುಕೊಳ್ಳಲು ಸಂಯಮ ಕಾಯ್ದುಕೊಳ್ಳಬೇಕು ಎಂದವರು ಹೇಳಿದ್ದಾರೆ.

# 8 ಬ್ರಾಹ್ಮಣ ಅಭ್ಯರ್ಥಿಗಳ ಸೋಲು : ಜಾತಿ ಗಣತಿ ಪರಿಣಾಮ

## ಛತ್ತೀಸ್‌ಘಡ ಚುನಾವಣೆ ಕುರಿತು ರಾಜಕೀಯ ವಿಶ್ಲೇಷಣೆ

ರಾಯಪುರ, ಡಿ. 8 – ಇತ್ತೀಚೆಗೆ ಛತ್ತೀಸ್‌ಘಡದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಕಣಕ್ಕಿಳಿದಿದ್ದ ಎಲ್ಲಾ 8 ಬ್ರಾಹ್ಮಣ ಅಭ್ಯರ್ಥಿಗಳು ಸೋಲು ಕಂಡಿದ್ದಾರೆ. ಕಾಂಗ್ರೆಸ್ ಪಕ್ಷ ಜಾತಿ ಗಣತಿಯ ಬೇಡಿಕೆ ಪ್ರಬಲವಾಗಿ ಮುಂದಿಡುತ್ತಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆಯಾಗಿರುವುದು ರಾಜಕೀಯ ಚರ್ಚೆಗೆ ಕಾರಣವಾಗಿದೆ.

ಕಾಂಗ್ರೆಸ್ ಪಕ್ಷದಿಂದ ಕಣದಲ್ಲಿದ್ದ ಬ್ರಾಹ್ಮಣರೂ ಸೇರಿದಂತೆ ಮೇಲ್ಜಾತಿಯ 15 ಅಭ್ಯರ್ಥಿಗಳ ಪೈಕಿ ಹದಿಮೂರು ಅಭ್ಯರ್ಥಿಗಳು ಸೋಲು ಕಂಡಿದ್ದಾರೆ. ಪಕ್ಷದಿಂದ ಕಣದಲ್ಲಿದ್ದ ಮೂವರು ಅಲ್ಪಸಂಖ್ಯಾತ ಅಭ್ಯರ್ಥಿಗಳೂ ಸೋಲು ಕಂಡಿದ್ದಾರೆ. ಜಾತಿ ಗಣತಿಯ ಬೇಡಿಕೆ ಮುಂದಿಟ್ಟಿದ್ದ ಕಾಂಗ್ರೆಸ್, ಚುನಾವಣಾ ಸಂದರ್ಭದಲ್ಲಿ ಈ ವಿಷಯವನ್ನು ಪ್ರಬಲವಾಗಿ ಪ್ರತಿಪಾದಿಸಿತ್ತು. ಇದು ಮೇಲ್ಜಾತಿಯವರ ಗೆಲ್ಲುವ ಸಾಧ್ಯತೆಗಳ ಮೇಲೆ ಪರಿಣಾಮ ಬೀರಿದೆ ಎಂದು ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ.

ಸಾಮಾನ್ಯ ಮೇಲ್ಜಾತಿಯ ಅಭ್ಯರ್ಥಿಗಳಷ್ಟೇ ಅಲ್ಲದೇ, ಮೀಸಲು ಕ್ಷೇತ್ರಗಳಲ್ಲೂ ಈ ವಿಷಯ ಪರಿಣಾಮ ಬೀರಿದೆ. ಭೂಪೇಶ್ ಬಾಘೇಲ್ ಅವರ ನೇತೃತ್ವದ ಸರ್ಕಾರ ಒ.ಬಿ.ಸಿ. ಪರ ನೀತಿಗಳನ್ನು ರೂಪಿಸಿದ್ದು ಫಲ ನೀಡಿಲ್ಲ. ಛತ್ತೀಸ್‌ಘಡದಲ್ಲಿ ಕಾಂಗ್ರೆಸ್ ಗೆಲುವು ಸುಲಭವಾಗಲಿದೆ ಎಂಬ ಭಾವನೆ ಇತ್ತು. ಆದರೆ, 90 ಸ್ಥಾನಗಳ ಪೈಕಿ 54ರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಕಳೆದ 2018ರಲ್ಲಿ ಕಾಂಗ್ರೆಸ್ ರಾಜ್ಯದ 68 ಕ್ಷೇತ್ರಗಳಲ್ಲಿ ಗೆಲುವು ಕಂಡಿತ್ತು. ಈ ಬಾರಿ 35 ಸ್ಥಾನ ಮಾತ್ರ ಪಡೆಯಲು ಸಾಧ್ಯವಾಗಿದೆ.

ಮೇಲ್ಜಾತಿಯ ಅಭ್ಯರ್ಥಿಗಳ ಪೈಕಿ ರಾಘವೇಂದ್ರ ಸಿಂಗ್ ಹಾಗೂ ಅಟಲ್ ಶ್ರೀವಾಸ್ತವ ಅವರು ಮಾತ್ರ ಗೆಲ್ಲಲು ಸಾಧ್ಯವಾಗಿದೆ. ಮೂರು ಬಾರಿಯ ಶಾಸಕರು ಹಾಗೂ ಉಪ ಮುಖ್ಯಮಂತ್ರಿಯಾಗಿದ್ದ ಟಿ.ಎಸ್. ಸಿಂಘ್ ದೇವ್ ಅವರೂ ಸೋಲು ಕಂಡಿದ್ದಾರೆ.

ಮತ್ತೊಂದೆಡೆ ಬಿಜೆಪಿಯು ಮೇಲ್ಜಾತಿಗೆ ಸೇರಿದ 18 ಜನರಿಗೆ ಟಿಕೆಟ್ ನೀಡಿತ್ತು. ಇವರಲ್ಲಿ 16 ಜನರು ಶಾಸಕರಾಗಿ ಆಯ್ಕೆಯಾಗಿದ್ದಾರೆ. ಏಳು ಬ್ರಾಹ್ಮಣ ಅಭ್ಯರ್ಥಿಗಳ ಪೈಕಿ ಐವರು ಗೆಲುವು ಸಾಧಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನಗಣತಿ ನಡೆಸಲಿದೆ ಎಂದು ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಹಾಗೂ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಅವರು ಭರವಸೆ ನೀಡಿದ್ದರು.

ಒ.ಬಿ.ಸಿ. ಮತಗಳ ದೃಷ್ಟಿಯಿಂದ ಜನಗಣತಿ ನಡೆಸಲು ಕಾಂಗ್ರೆಸ್ ಮುಂದಾಗಿದ್ದು, ಮೇಲ್ಜಾತಿಯ ಮತಗಳನ್ನು ಒಡೆದಂತೆ ಕಂಡು ಬರುತ್ತಿದೆ. ಸಾಮಾನ್ಯ ಕ್ಷೇತ್ರಗಳಲ್ಲಿ ಮೇಲ್ಜಾತಿಯ ಕಾಂಗ್ರೆಸ್ ಅಭ್ಯರ್ಥಿಗಳು ಸೋಲು ಕಂಡಿದ್ದಾರೆ ಎಂದು ಚುನಾವಣಾ ವಿಶ್ಲೇಷಕ ಆರ್. ಕೃಷ್ಣ ದಾಸ್ ಹೇಳಿದ್ದಾರೆ. ಮತ್ತೊಂದೆಡೆ ಬಿಜೆಪಿ ಹಿಂದುತ್ವ ಅಜೆಂಡಾದಿಂದ ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ ಎಂದೂ ದಾಸ್ ತಿಳಿಸಿದ್ದಾರೆ.

ಕಾಂಗ್ರೆಸ್ ಪಕ್ಷದಿಂದ ಕಣದಲ್ಲಿದ್ದ 29 ಒ.ಬಿ.ಸಿ. ಅಭ್ಯರ್ಥಿಗಳ ಪೈಕಿ 16 ಜನರು ಗೆಲುವು ಸಾಧಿಸಿದ್ದಾರೆ. ಬಿಜೆಪಿಯ 31 ಒ.ಬಿ.ಸಿ. ಅಭ್ಯರ್ಥಿಗಳಲ್ಲಿ 19 ಜನರು ಜಯ ಗಳಿಸಿದ್ದಾರೆ.

## ಐ.ಟಿ. ದಾಳಿಯಲ್ಲಿ 220 ಕೋಟಿ ರೂ.ಪತ್ತೆ

ನವದೆಹಲಿ, ಡಿ. 8 – ಒಡಿಶಾದ ಬಲದೇವ್ ಸಾಹು ಡಿಸ್ಟಿಲರಿ ಸಮೂಹದ ಮೇಲೆ ನಡೆಸಿದ ದಾಳಿಯಲ್ಲಿ ಆದಾಯ ತೆರಿಗೆ ಇಲಾಖೆ 220 ಕೋಟಿ ರೂ.ಗಳಿಗೂ ಹೆಚ್ಚು ನಗದು ವಶಪಡಿಸಿಕೊಂಡಿದೆ. ಶುಕ್ರವಾರದಂದು ಆದಾಯ ತೆರಿಗೆ ಇಲಾಖೆಗೆ ನೋಟುಗಳು ತುಂಬಿದ 156 ಚೀಲಗಳು ಪತ್ತೆಯಾಗಿದ್ದವು. ಸತತ ಮೂರು ದಿನಗಳ ಕಾಲ ಆದಾಯ ತೆರಿಗೆ ಇಲಾಖೆ ಶೋಧ ಕಾರ್ಯ ನಡೆಸಿತ್ತು. ಒಟ್ಟಾರೆ ವಶಪಡಿಸಿಕೊಳ್ಳಲಾದ ಮೊತ್ತ 220 ಕೋಟಿ ರೂ.ಗಳಷ್ಟಿದೆ.


ಸಂಬಲ್ಪುರ, ಬೊಲಂಗಿರ್, ತಿತಲಿಘರ್, ಬೌಧ್, ಸುಂದರ್‌ಘರ್, ರೂರ್ಕೆಲ ಹಾಗೂ ಭುವನೇಶ್ವರಗಳಲ್ಲಿ ದಾಳಿ ನಡೆಸಲಾಗಿದೆ.

ಈ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸಹ ಪ್ರತಿಕ್ರಿಯೆ ನೀಡಿದ್ದು, ಸಾರ್ವಜನಿಕರಿಂದ ಲೂಟಿ ಮಾಡಲಾದ ಹಣ ಅವರಿಗೆ ಮರಳಿಸಬೇಕು ಎಂದಿದ್ದಾರೆ. ಒಡಿಶಾ ಹಾಗೂ ಜಾರ್ಖಂಡ್‌ನ ಹಲವು ರಾಜಕಾರಣಿಗಳು ಈ ಅಕ್ರಮದಲ್ಲಿ ಭಾಗಿಯಾಗಿ ದ್ದಾರೆ ಎಂದು ಶಂಕಿಸಲಾಗಿದೆ. ದೇಶ ಈ ನೋಟುಗಳ ಕಂತೆ ನೋಡಿದೆ ಹಾಗೂ ಈ 'ಪ್ರಾಮಾಣಿಕ' ನಾಯಕರ ಭಾಷಣಗಳನ್ನು ಕೇಳಿದೆ. ಅವರು ಸಾರ್ವಜನಿಕರಿಂದ ಲೂಟಿ ಮಾಡಿರುವ ಹಣದ ಪ್ರತಿಯೊಂದು ಪೈಸೆಯನ್ನೂ ವಾಪಸ್ ಜನರಿಗೆ ನೀಡಲಾಗುವುದು. ಇದು ಮೋದಿ ಗ್ಯಾರಂಟಿ ಎಂದು ಪ್ರಧಾನಿ ಹೇಳಿದ್ದಾರೆ.

ಈ ನಡುವೆ ಒಡಿಶಾದ ಬಿಜೆಪಿ ವಕ್ತಾರ ಮನೋಜ್ ಮೋಹಾಪಾತ್ರ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದು, ಇಡೀ ಪ್ರಕರಣದ ಸಿ.ಬಿ.ಐ. ತನಿಖೆ ನಡೆಸಬೇಕು. ಒಡಿಶಾದ ಆಡಳಿತಾರೂಢ ಬಿ.ಜೆ.ಡಿ. ಘಟಕ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಬಿಜೆಡಿ ಶಾಸಕ ಸತ್ಯನಾರಾಯಣ ಪ್ರಧಾನ್, ಒಡಿಶಾ ಮುಖ್ಯಮಂತ್ರಿ ನವೀನ್ ಪಾಟ್ನಾಯಕ್ ಅವರು ಪಾರದರ್ಶಕತೆಯಲ್ಲಿ ನಂಬಿಕೆ ಇರಿಸಿದ್ದಾರೆ. ಕಾನೂನು ರೀತಿ ಕ್ರಮ ತೆಗೆದುಕೊಳ್ಳಬೇಕು ಎಂದಿದ್ದಾರೆ

## ಲೋಕಸಭೆಯಿಂದ ಮೊಯಿತ್ರ ಉಚ್ಚಾಟನೆ



ನವದೆಹಲಿ, ಡಿ. 8- ತೃಣಮೂಲ ಕಾಂಗ್ರೆಸ್ ನಾಯಕಿ ಮೊಹುವಾ ಮೊಯಿತ್ರ ಅವರನ್ನು ಲೋಕಸಭೆ ಯಿಂದ ಉಚ್ಚಾಟಿಸಲಾಗಿದೆ. ಉದ್ಯಮಿಯೊಬ್ಬರ ಹಿತಾಸಕ್ತಿ ಪರ ಕೆಲಸ ಮಾಡಲು ಕೊಡುಗೆ ಹಾಗೂ ಅಕ್ರಮ ಸವಲತ್ತುಗಳನ್ನು ಪಡೆದ ಬಗ್ಗೆ ನೈತಿಕ ಸಮಿತಿ ವರದಿ ನೀಡಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಸಮಿತಿಯ ವರದಿ ಕುರಿತು ಲೋಕಸಭೆ ಯಲ್ಲಿ ಶುಕ್ರವಾರ ಚರ್ಚೆ ನಡೆಯಿತು. ನಂತರ ತೃಣಮೂಲ ಕಾಂಗ್ರೆಸ್ ಸಂಸದೆಯನ್ನು ಉಚ್ಚಾ ಟಿಸುವ ಕುರಿತು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಅವರು ನಿಲುವಳಿ ಮಂಡಿಸಿ ದರು. ಧ್ವನಿಮತ ದಿಂದ ಅಂಗೀಕರಿಸಲಾ ಯಿತು.

ನಿಲುವಳಿ ಕುರಿತು ಬಿರುಸಿನ ಚರ್ಚೆ ನಡೆಯಿತಾದರೂ, ಮೊಯಿತ್ರ ಮಾತನಾಡಲು ಅವಕಾಶ ಕೊಡಲಿಲ್ಲ. ನಂತರ ಪ್ರತಿಕ್ರಿಯೆ ನೀಡಿರುವ ಮೊಯಿತ್ರ, ಕಾಂಗರೂ ನ್ಯಾಯಾಲಯದ ಮೂಲಕ ಈ ಕ್ರಮ ತೆಗೆದುಕೊಳ್ಳಲಾಗಿದೆ. ಸರ್ಕಾರ ಪ್ರತಿಪಕ್ಷಗಳ ದಮನಕ್ಕೆ ಸದನದ ಸಮಿತಿಯನ್ನು ಅಸ್ತ್ರವಾಗಿ ಬಳಸಿಕೊಂಡಿದೆ ಎಂದು ಆರೋಪಿಸಿದರು. ಮೊಯಿತ್ರ ಅವರು ಲೋಕಸಭಾ ಸದಸ್ಯರ ಪೋರ್ಟಲ್‌ನ ಗುರುತಿನ ಐಡಿ ಹಾಗೂ ಪಾಸ್‌ವರ್ಡ್ ಅನ್ನು ಅನಧಿಕೃತ ವ್ಯಕ್ತಿಗಳ ಜೊತೆ ಹಂಚಿಕೊಂಡಿದ್ದಾರೆ. ಇದರಿಂದ ರಾಷ್ಟ್ರದ ಭದ್ರತೆ ಮೇಲೆ ಪರಿಣಾಮವಾಗಿದೆ ಎಂದು ನೈತಿಕ ಸಮಿತಿಯ ವರದಿಯಲ್ಲಿ ತಿಳಿಸಲಾಗಿತ್ತು.

ಮೊಯಿತ್ರ ಅವರು ಸದನದಲ್ಲಿ ಮಾತನಾಡಲು ಅವಕಾಶ ನೀಡಬೇಕು ಎಂದು ತೃಣಮೂಲ ಕಾಂಗ್ರೆಸ್ ಹಾಗೂ ಇತರೆ ಪ್ರತಿಪಕ್ಷಗಳು ಒತ್ತಾಯಿಸಿದವು. ಆದರೆ, ಈ ಹಿಂದಿನ ನಡಾವಳಿಗಳನ್ನು ಪ್ರಸ್ತಾಪಿಸಿದ ಲೋಕಸಭಾಧ್ಯಕ್ಷ ಓಂ ಬಿರ್ಲಾ, ಮಾತನಾಡಲು ಅವಕಾಶ ನೀಡಲಿಲ್ಲ.

2005ರಲ್ಲಿ ಕಾಸಿಗಾಗಿ ಪ್ರಶ್ನೆ ಹಗರಣದಲ್ಲಿ ಸಿಲುಕಿದ್ದ 10 ಲೋಕಸಭಾ ಸದಸ್ಯರು ಸದನದಲ್ಲಿ ಮಾತನಾಡಲು ಆಗಿನ ಲೋಕಸಭಾಧ್ಯಕ್ಷ ಸೋಮನಾಥ್ ಚಟರ್ಜಿ ಅವರು ಅವಕಾಶ ನೀಡಿರಲಿಲ್ಲ ಎಂದು ಬಿರ್ಲಾ ಹೇಳಿದರು.

## ಜೇನು ಹುಳು ನುಂಗಿದ ಯುವಕನ ಸಾವು

ಭೂಪಾಲ್, ಡಿ. 8 – ನೀರು ಕುಡಿಯುವಾಗ ಆಕಸ್ಮಿಕವಾಗಿ ಜೇನು ಹುಳು ನುಂಗಿದ್ದ ಮಧ್ಯ ಪ್ರದೇಶದ 22 ವರ್ಷದ ಯುವಕ ಸಾವನ್ನಪ್ಪಿದ ಘಟನೆ ನಡೆದಿದೆ.

ಜೇನು ಹುಳು ನಾಲಿಗೆ ಹಾಗೂ ಅನ್ನ ನಾಳದಲ್ಲಿ ಕಡಿದ ನಂತರ, ಅವು ಊದಿಕೊಂಡು ಸಾವು ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಮಿಕರಾದ ಹಿರೇಂದ್ರ ಸಿಂಗ್ ಬರೇಸಿಯಾದಲ್ಲಿರುವ ತಮ್ಮ ಮನೆಯಲ್ಲಿ ನೀರು ಕುಡಿಯುವಾಗ ಆಕಸ್ಮಿಕವಾಗಿ ಜೇನು ಹುಳು ನುಂಗಿದ್ದರು. ನಂತರ ಅವರಲ್ಲಿ ಉಸಿರಾಟದ ಸಮಸ್ಯೆ ಕಂಡು ಬಂತು. ತಕ್ಷಣವೇ ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಪರಿಸ್ಥಿತಿ ಸುಧಾರಿಸದ ಕಾರಣ ಖಾಸಗಿ ಆಸ್ಪತ್ರೆಗೆ ಕರೆದೊಯ್ಯ ಲಾಯಿತು. ಅಲ್ಲಿ ಅವರು ಕೊನೆಯುಸಿರೆಳೆದಿದ್ದಾರೆ.

## ಮಹಿಳಾ ಸ್ವಸಹಾಯ ಸಂಘಗಳ ಸಬಲೀಕರಣಕ್ಕೆ ನಬಾರ್ಡ್ ನೆರವು




ಜಗಳೂರು, ಡಿ.8- ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಮತ್ತು ರೈತರ ಅಭ್ಯುದಯಕ್ಕಾಗಿ ನಬಾರ್ಡ್ ಸಂಸ್ಥೆಯಿಂದ ವಿವಿಧ ಯೋಜನೆಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದ್ದು, ಸದುಪಯೋಗ ಪಡೆದುಕೊಳ್ಳಬೇಕು ಎಂದು ನಬಾರ್ಡ್ ಜಿಲ್ಲಾ ವ್ಯವಸ್ಥಾಪಕರಾದ ರಶ್ಮಿರೇಖಾ ತಿಳಿಸಿದರು.

ತಾಲ್ಲೂಕಿನ ಬಿಸ್ತುವಳ್ಳಿ ಗ್ರಾಮದಲ್ಲಿ ನಬಾರ್ಡ್ ಹಾಗೂ ಕೆನರಾ ಬ್ಯಾಂಕ್ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಸ್ವಸಹಾಯ ಸಂಘ ಮತ್ತು ರೈತರಿಗೆ ಆರ್ಥಿಕ ನೆರವು ಯೋಜನೆಗಳ ಕುರಿತು ಜಾಗೃತಿ ಅಭಿಯಾನದಲ್ಲಿ ಅವರು ಮಾತನಾಡಿದರು.

ರೈತರ ಹೊಲಗಳಲ್ಲಿ ಕೀಟನಾಶಕ ಸಿಂಪರಣೆ ಮಾಡುವ ಕಾರ್ಯವನ್ನು ಕೈಗೆತ್ತಿಕೊಳ್ಳಬಹುದಾಗಿದೆ. ಡ್ರೋನ್ ಬಳಕೆ ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿದ್ದು, ಇದರಿಂದ ವೇಗವಾಗಿ ಮತ್ತು ಸುರಕ್ಷತೆಯಿಂವದ ಹೆಚ್ಚಿನ ಪ್ರದೇಶದಲ್ಲಿ ಔಷಧಿ ಸಿಂಪರಣೆ ಮಾಡಬಹುದಾಗಿದೆ. ಸ್ವಸಹಾಯ ಸಂಘಗಳಿಗೆ ಲಾಭದಾಯಕವಾಗಲಿದೆ ಎಂದರು.

ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಪ್ರಸ್ತುತ ಸಿಬಿಲ್ ಅತ್ಯಂತ ಮುಖ್ಯವಾಗಿದ್ದು, ಬ್ಯಾಂಕ್‌ಗಳಲ್ಲಿ ವಹಿವಾಟು ಮಾಡುವ ರೈತರು ಸಕಾಲದಲ್ಲಿ ಸಾಲದ ನವೀಕರಣ ಅಥವಾ ಮರುಪಾವತಿ ಮಾಡುವ ಮೂಲಕ ಸಿಬಿಲ್ ಸ್ಕೋರ್ ಕುಸಿಯದಂತೆ ಎಚ್ಚರ ವಹಿಸಬೇಕು ಎಂದು ಕೆನರಾ ಬ್ಯಾಂಕ್ ಶಾಖೆ ವ್ಯವಸ್ಥಾಪಕ ಹಣಮಂತ ಬೈರಗೊಂಡ ಹೇಳಿದರು.

ಬಿಸ್ತುವಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಣಿ ಶಶಿಕಾಂತ್, ಮುಖ್ಯಶಿಕ್ಷಕ ಶಾಮಣ್ಣ, ಮುಖಂಡರಾದ ಬಿಸ್ತುವಳ್ಳಿ ಬಾಬು, ಬಿ.ಟಿ. ಶ್ರೀನಿವಾಸ ರೆಡ್ಡಿ, ಲಕ್ಷ್ಮೀಪತಿ ಗೌಡ, ಜಯರಾಜ್, ಅನುರಾಧ , ಸೌಭಾಗ್ಯಲಕ್ಷ್ಮಿ ಇದ್ದರು.

## ಸೆಂಟ್ರಲ್ ವಿಸ್ಟಾದ ವಕ್ಫ್ ಆಸ್ತಿಗಳ ರಕ್ಷಣೆ : ಕೇಂದ್ರದ ನಿಲುವು ಕೇಳಿದ ದೆಹಲಿ ಹೈಕೋರ್ಟ್

ನವದೆಹಲಿ, ಡಿ. 8 – ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ಸೆಂಟ್ರಲ್ ವಿಸ್ಟಾ ಮರು ನಿರ್ಮಾಣ ಯೋಜನೆಯಲ್ಲಿ ಬರುವ ವಕ್ಫ್ ಆಸ್ತಿಗಳ ಕುರಿತು ಕೇಂದ್ರ ಸರ್ಕಾರ ತನ್ನ ನಿಲುವು ತಿಳಿಸಬೇಕೆಂದು ದೆಹಲಿ ಹೈಕೋರ್ಟ್ ಹೇಳಿದೆ.

ದೆಹಲಿ ವಕ್ಫ್ ಮಂಡಳಿಯ ಕೆಲ ಆಸ್ತಿಗಳ ಮೇಲೆ ಆಗಿರುವ ಇಲ್ಲವೇ ಆಗಬಹುದಾದ ಪರಿಣಾಮಗಳ ಕುರಿತು ವಿವರ ನೀಡುವಂತೆ ನ್ಯಾಯಮೂರ್ತಿ ಪ್ರತೀಕ್ ಜಲಾನ್ ಅವರು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದಾರೆ.

ಸೆಂಟ್ರಲ್ ವಿಸ್ಟಾದಲ್ಲಿ ಬರುವ ಆರು ಆಸ್ತಿಗಳಿಗೆ ಸಂಬಂಧಿಸಿದಂತೆ ಮಂಡಳಿ 2021ರಲ್ಲಿ ಹೈಕೋರ್ಟ್ ಮೊರೆ ಹೋಗಿತ್ತು.

ಮಾನ್‌ಸಿಂಗ್ ರಸ್ತೆಯಲ್ಲಿರುವ ಜಬ್ತಾ ಗಂಜ್ ಮಸೀದಿ, ರೆಡ್ ಕ್ರಾಸ್ ರಸ್ತೆಯಲ್ಲಿರುವ ಜಾಮಾ ಮಸೀದಿ, ಉದ್ಯೋಗ ಭವನದ ಬಳಿ ಇರುವ ಸುನೇರಿ ಬಾಗ್ ರಸ್ತೆಯ ಮಸೀದಿ, ಮೋತಿ ಲಾಲ್ ನೆಹರು ಮಾರ್ಗದ ಹಿಂದಿರುವ ಮಜರ್, ಕೃಷಿ ಭವನದ ಆವರಣದಲ್ಲಿರುವ ಕೃಷಿ ಭವನ ಮಸೀದಿ ಹಾಗೂ ಉಪ ರಾಷ್ಟ್ರಪತಿ ಅಧಿಕೃತ ನಿವಾಸದ ಒಳಗೆ ಇರುವ ಮಸೀದಿಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಈ ಪ್ರಕರಣದ ವಿಚಾರಣೆ ಬಾಕಿ ಇರುವಾಗಲೇ ಸುನೇರಿ ಬಾಗ್ ಮಸೀದಿಯ ಬಳಿ ಇರುವ ಮಜರ್ ಅನ್ನು ಧ್ವಂಸಗೊಳಿಸಲಾಗಿದೆ. ಈ ಬಗ್ಗೆ ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಬೇಕು ಎಂದು ವಕ್ಫ್ ಮಂಡಳಿ ಪರ ವಕೀಲರು ಅರ್ಜಿ ದಾಖಲಿಸಿದ್ದಾರೆ.

ಈ ವಿಷಯ ಎರಡು ವರ್ಷಗಳಿಂದ ಬಾಕಿ ಇದೆ. ಕೇಂದ್ರ ಸರ್ಕಾರದ ನಿಲುವು ಕೇಳದೇ ತಡೆಯಾಜ್ಞೆ ಹೊರಡಿಸಲಾಗದು ಎಂದು ಕೋರ್ಟ್ ಹೇಳಿದೆ.

ಈ ಬಗ್ಗೆ ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ವಕೀಲರು ಹೇಳಿಕೆ ನೀಡಿ, ಸೆಂಟ್ರಲ್ ವಿಸ್ಟಾ ಮರು ನಿರ್ಮಾಣ ಪ್ರಗತಿಯಲ್ಲಿರುವ ಕಾಮಗಾರಿಯಾಗಿದೆ.

ಮಜರ್ ಅನ್ನು ದೆಹಲಿ ನಗರ ಪಾಲಿಕೆಯವರು ನೆಲಸಮ ಮಾಡಿದ್ದಾರೆ. ಪ್ರಸಕ್ತ ಉಳಿದ ಆಸ್ತಿಗಳ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರು.

## ರಾಜ್ಯಪಾಲರನ್ನು ರಾಜ್ಯಗಳೇ ಆಯ್ಕೆ ಮಾಡಬೇಕು : ಶಿವದಾಸನ್

ನವದೆಹಲಿ, ಡಿ. 8 – ರಾಜ್ಯಗಳೇ ರಾಜ್ಯಪಾಲರನ್ನು ಆಯ್ಕೆ ಮಾಡಿಕೊಳ್ಳಲು ಸಂವಿಧಾನಕ್ಕೆ ತಿದ್ದುಪಡಿ ತರುವ ಅಗತ್ಯವಿದೆ ಎಂದು ಸಿಪಿಐ (ಎಂ) ಸಂಸದ ವಿ. ಶಿವದಾಸನ್ ರಾಜ್ಯಸಭೆಯಲ್ಲಿ ಹೇಳಿದ್ದಾರೆ.

ವಸಹಾತುಶಾಹಿ ಕಾಲದ ರಾಜ್ಯಪಾಲರ ಹುದ್ದೆಯನ್ನು ಬದಲಿಸಬೇಕಿದೆ ಎಂದು ಸಿಪಿಐ (ಎಂ) ನಾಯಕ ಶಿವದಾಸನ್ ಹೇಳಿದ್ದಾರೆ. ಕಳೆದ ವರ್ಷ ಡಿಸೆಂಬರ್ 9ರಂದು ಅವರು ಈ ಕುರಿತು ಖಾಸಗಿ ಮಸೂದೆಯನ್ನು ಸದನಕ್ಕೆ ಸಲ್ಲಿಸಿದ್ದರು.

ಈ ಕುರಿತು ಶುಕ್ರವಾರ ಚರ್ಚೆ ಆರಂಭಿಸಿದ ಅವರು, ಕೇಂದ್ರ ಸರ್ಕಾರ ರಾಜ್ಯಪಾಲರನ್ನು ತನ್ನ ದಾಳವಾಗಿ ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ರಾಜ್ಯಪಾಲರನ್ನು ಕೇಂದ್ರ ಸರ್ಕಾರದ ಸಲಹೆಯ ಮೇಲೆ ರಾಷ್ಟ್ರಪತಿ ನೇಮಿಸಬಾರದು. ರಾಜ್ಯಪಾಲರನ್ನು ರಾಜ್ಯ ಸರ್ಕಾರವೇ ನೇಮಿಸಬೇಕು. ಜನಾದೇಶವನ್ನು ಗೌರವಿಸಬೇಕು ಎಂದವರು ಹೇಳಿದರು. ಇದಕ್ಕೆ ಪ್ರತಿವಾದ ಮಂಡಿಸಿದ ಬಿಜೆಪಿ ಸಂಸದ ಅನಿಲ್ ಅಗರ್‌ವಾಲ್, ರಾಜ್ಯಪಾಲರು ಪ್ರಜಾಪ್ರಭುತ್ವದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂದರು.

# ಶಾಸಕ ಯತ್ನಾಳ್ ಗುರಿ ಪ್ರಧಾನ ಮಂತ್ರಿ

## ಮೋದಿ ಜೊತೆ ಇರುವ ಹಾಶ್ಮಿ ಚಿತ್ರ ಪ್ರದರ್ಶಿಸಿ ಸಿದ್ದರಾಮಯ್ಯ ವ್ಯಂಗ್ಯ



ಬೆಳಗಾವಿ, ಡಿ. 8 - ಮೌಲ್ವಿ ತನ್ವೀರ್ ಹಾಶ್ಮಿ ಅವರ ಜೊತೆಗಿನ ನನ್ನ ಫೋಟೋವನ್ನು ಹಿಡಿದುಕೊಂಡು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ನನ್ನ ವಿರುದ್ಧ ಆರೋಪ ಮಾಡಿದರೂ ಅವರ ನಿಜವಾದ ಗುರಿ ಪ್ರಧಾನಿ ನರೇಂದ್ರ ಮೋದಿ ಅವರು ಎನ್ನುವುದು ನಿಧಾನವಾಗಿ ಬಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ವ್ಯಂಗ್ಯವಾಡಿದ್ದಾರೆ.

ಮೋದಿ ಅವರ ಜೊತೆ ಹಾಶ್ಮಿ ಇರುವ ಚಿತ್ರವನ್ನು ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ ಅವರು, ಮೌಲ್ವಿ ಅವರ ಜೊತೆಗೆ ಇತರೆ ಬಿಜೆಪಿ ನಾಯಕರು ಮಾತ್ರವಲ್ಲ ಸಾಕ್ಷಾತ್ ನರೇಂದ್ರ ಮೋದಿ ಅವರೂ ಸಂಬಂಧ ಹೊಂದಿರುವುದು ಮಾಧ್ಯಮಗಳಲ್ಲಿ ಬಿಡುಗಡೆಯಾಗಿರುವ ಫೋಟೋಗಳು ಸ್ಪಷ್ಟವಾಗಿ ಹೇಳುತ್ತಿವೆ ಎಂದರು.

ದೀರ್ಘಕಾಲದಿಂದ ಹಾಶ್ಮಿ ಅವರಿಗೆ ಅತ್ಯಂತ ಆತ್ಮೀಯರಾಗಿರುವ ಮತ್ತು ಊರಿನಲ್ಲಿ ತನ್ನ ನೆರೆಹೊರೆಯಾಗಿರುವ ಯತ್ನಾಳ್ ಅವರಿಗೆ ಇದು ತಿಳಿದಿರಲಿಲ್ಲ ಎನ್ನುವುದನ್ನು ನಂಬಲು ಸಾಧ್ಯವೇ?

ರಾಜ್ಯ ಬಿಜೆಪಿ ಅಧ್ಯಕ್ಷತೆ ಮತ್ತು ವಿರೋಧ ಪಕ್ಷದ ನಾಯಕನ ಸ್ಥಾನ ತಪ್ಪಿ ಹೋಗಿರುವುದರಿಂದ ಯತ್ನಾಳ್ ಅವರು ಕೆರಳಿ ಕೆಂಡವಾಗಿದ್ದಾರೆ.

ಇದಕ್ಕೆ ಕಾರಣಕರ್ತರಾದ ಮೋದಿ ಮತ್ತು ಅಮಿತ್ ಶಾ ವಿರುದ್ಧ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದಲೇ ಮೌಲ್ವಿ ತನ್ವೀರ್ ಹಾಶ್ಮಿ ಜೊತೆಗಿನ ನನ್ನ ಫೋಟೋವನ್ನು ತೋರಿಸಿ ಆರೋಪ ಮಾಡಿದ್ದಾರೆ ಎಂದು ಹೇಳಿದರು.

ಈ ಆರೋಪದ ನಂತರ ಮೌಲ್ವಿ ಅವರ ಜೊತೆಗಿನ ಪ್ರಧಾನಿ ಅವರ ಸಂಬಂಧದ ವಿವರವೂ ಹೊರಬರಲಿದೆ ಎನ್ನುವುದು ಅವರಿಗೆ ಖಂಡಿತಾ ಗೊತ್ತಿತ್ತು. ಅವೆಲ್ಲವೂ ಬಯಲಾಗಿ ಮೋದಿ ಮತ್ತು ಬಿಜೆಪಿ ನಾಯಕರು ಮುಜುಗರಕ್ಕೀಡಾಗಲಿ ಎನ್ನುವ ದುರುದ್ದೇಶದಿಂದ ನನ್ನ ವಿರುದ್ಧ ಆರೋಪ ಮಾಡುವ ಆಟ ಆಡಿದ್ದಾರೆ.

ಮೌಲ್ವಿ ಹಾಶ್ಮಿ ಅವರ ಜೊತೆಗಿನ ನನ್ನ ಸ್ನೇಹ ಸಂಬಂಧವನ್ನು ನಾನು ಬಹಿರಂಗವಾಗಿಯೇ ಒಪ್ಪಿಕೊಂಡಿದ್ದೇನೆ. ಅವರೂ ಕೂಡಾ ತಮ್ಮ ಮೇಲಿನ ಆರೋಪದ ತನಿಖೆಯನ್ನು ಕೇಂದ್ರ ಸರ್ಕಾರವೇ ನಡೆಸಲಿ ಎಂದು ಸವಾಲು ಹಾಕಿದ್ದಾರೆ.

ಈಗ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ವಿರುದ್ಧದ ಆರೋಪಕ್ಕೆ ಪ್ರತಿಕ್ರಿಯಿಸಲೇ ಬೇಕಾಗುತ್ತದೆ. ಹಾಶ್ಮಿ ಅವರಿಗೆ ನಿಜವಾಗಿ ಐಸಿಸ್ ಜೊತೆ ಸಂಬಂಧ ಇದ್ದರೆ, ಆ ಬಗ್ಗೆ ತನಿಖೆಗೆ ಪ್ರಧಾನಿಯವರು ತಕ್ಷಣ ಆದೇಶ ನೀಡಬೇಕು. ಹಾಶ್ಮಿ ಮತ್ತು ತನ್ನ ಸಂಬಂಧದ ವಿವರವನ್ನು ದೇಶದ ಮುಂದಿಡಬೇಕು.


ಇದು ಎರಡೂ ಮಾಡದೇ ಇದ್ದರೆ ಇಂತಹ ಸುಳ್ಳು ಆರೋಪ ಮಾಡುವ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಕ್ರಮವನ್ನಾದರೂ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಬಸನಗೌಡ ಪಾಟೀಲ್ ಯತ್ನಾಳ್ ಈ ರೀತಿಯ ಆರೋಪಗಳನ್ನು ಮಾಡುವುದು ಇದೇ ಮೊದಲ ಸಲವೇನಲ್ಲ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಮಕ್ಕಳ ವಿರುದ್ಧ ಪುಂಖಾನುಪುಂಖವಾಗಿ ಆರೋಪ ಮಾಡಿದ್ದಾರೆ ಎಂದು ಹೇಳಿದರು.

ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಸುದ್ದಿಯ ಪ್ರಕಾರ, ತನ್ವೀರ್ ಹಾಶ್ಮಿ ಕುಟುಂಬದ ಜೊತೆಯಲ್ಲಿ ಯತ್ನಾಳ್ ಅವರಿಗೆ ವ್ಯಾಪಾರಿ ಸಂಬಂಧ ಕೂಡಾ ಇದೆ ಎನ್ನುವುದು ಬಯಲಾಗಿದೆ.

ಯತ್ನಾಳ್ ಅವರ ಆರೋಪದಂತೆ ತನ್ವೀರ್ ಹಾಶ್ಮಿ ಅವರಿಗೆ ಐಸಿಸ್ ಜೊತೆ ಸಂಬಂಧ ಇರುವುದಾಗಿದ್ದರೆ, ಅವರ ಜೊತೆಗೆ ವ್ಯವಹಾರದ ಪಾಲುದಾರರಾಗಿರುವ ಯತ್ನಾಳ್ ಅವರಿಗೆ ಅದು ಗೊತ್ತಿರಲಿಲ್ಲವೇ? ಗೊತ್ತಿದ್ದೂ ಸುಮ್ಮನಿರಲು ಕಾರಣವೇನು? ಇಷ್ಟು ಸಮಯದ ನಂತರ ಇಂತಹ ಆರೋಪ ಮಾಡಲು ಕಾರಣಗಳೇನು ಎನ್ನುವುದನ್ನು ಕೂಡಾ ಕೇಂದ್ರ ಸರ್ಕಾರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.







ಕನಕ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ
ಚುನಾವಣೆ – 2023-2028

ಆತ್ಮೀಯ ಬಂಧುಗಳೇ,
ದಿನಾಂಕ : 10-12-2023 ರಂದು ಭಾನುವಾರ ನಡೆಯಲಿರುವ ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ, ದಾವಣಗೆರೆ. ಇದರ ಚುನಾವಣೆಗೆ ಈ ಕೆಳಕಂಡ ನಾವುಗಳು ನಿರ್ದೇಶಕರ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ಆದ ಪ್ರಯುಕ್ತ ತಾವುಗಳು ತಮ್ಮ ಅಮೂಲ್ಯವಾದ ಮತವನ್ನು ನಮ್ಮ ತಂಡಕ್ಕೆ ನೀಡಿ ಜಯಶೀಲರನ್ನಾಗಿ ಮಾಡಿ, ತಮ್ಮೆಲ್ಲರ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಶ್ರೀ ಲೋಕಿಕೆರೆ ಸಿದ್ದಪ್ಪನವರ ತಂಡ
ವಕೀಲರು

ಬ್ಯಾಲೆಟ್ ನಮೂನೆ

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಗುರುತು | ಚಿಹ್ನೆ |
|---|---|---|---|
| 1 | | | |
| 2 | | | |
| 3 | | | |
| 4 | | | |
| 5 |  ಚಂದ್ರಶೇಖರ್ ಬಿ. ಜಮ್ಮಳ್ಳಿ ಮೊ. : 99022 22722 | ಕ್ಯಾಮೆರಾ | |
| 6 |  ಚೌಡಪ್ಪ ಪಿ. ಮೊ. : 99457 05539 | ಬ್ಯಾಟ್ | |
| 7 |  ಜಯಪ್ಪ ಎಂ. ಬಳ್ಳಾರಿ ಮೊ. : 9036655407 | ಸೀಲಿಂಗ್ ಫ್ಯಾನ್ | |
| 8 | | | |
| 9 | | | |
| 10 | | | |
| 11 | | | |

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಗುರುತು | ಚಿಹ್ನೆ |
|---|---|---|---|
| 12 |  ಶ್ರೀಮತಿ ಭಾಗ್ಯಮ್ಮ ಡಿ.ಬಿ. ದೀಟೂರು ಮಹಿಳಾ ಮೀಸಲಾತಿ ಮೊ. : 9980487019 | ಗ್ಯಾಸ್ ಸಿಲಿಂಡರ್ | |
| 13 |  ರುದ್ರಪ್ಪ ಹೆಚ್. ಎಂ. ಮೊ. : 9448247127 | ದ್ರಾಕ್ಷಿ ಗೊಂಚಲು | |
| 14 | | | |
| 15 | | | |
| 16 |  ಶಫೀ ಅಹ್ಮದ್ ಹಿಂದುಳಿ ವರ್ಗ 'ಬ' ಮೊ. : 9742913199 | ಹೂಕೋಸು | |
| 17 | | | |
| 18 |  ಸಂಗೇಗೌಡ ಎಸ್. (ರಾಜಣ್ಣ) ಮೊ. : 9036759261 | ಆಟೋರಿಕ್ಷಾ | |
| 19 |  ಸಕ್ರೆನಾಯ್ಕ್ ಪರಿಶಿಷ್ಟ ಜಾತಿ ಮೊ. : 9900637498 | ಪ್ರೆಶರ್ ಕುಕ್ಕರ್ | |
| 20 |  ಡಾ. ಸಿದ್ದಪ್ಪ ಕೆ. ಎಂಬಿಬಿಎಸ್, ಎಂಡಿ. ಮೊ. : 9986206226 | ಗಾಜಿನ ಲೋಟ | |
| 21 |  ಲೋಕಿಕೆರೆ ಸಿದ್ದಪ್ಪ ಟಿ.ಹೆಚ್. ವಕೀಲರು ಮೊ. : 9449684096 | ತೆಂಗಿನಕಾಯಿ | |
| 22 |  ಶ್ರೀಮತಿ ಸುಧಾ ಕೆ ಮಹಿಳಾ ಮೀಸಲಾತಿ ಮೊ. : 9481527290 | ಕಿರೀಟ | |

ಮತದಾನ ದಿನಾಂಕ : 10-12-2023ನೇ ಭಾನುವಾರ
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00 ರ ವರೆಗೆ
ಸ್ಥಳ : ಶ್ರೀಮತಿ ಸುಂದರಮ್ಮ ರಾಜನಹಳ್ಳಿ ಲಕ್ಷ್ಮಣ ಶೆಟ್ಟಿ ಮಹಾತ್ಮ ವಿದ್ಯಾಲಯ, (ಕಿರಿಯ ಪ್ರಾಥಮಿಕ ಶಾಲೆ), ಬಡಾವಣೆ ಪೊಲೀಸ್ ಠಾಣೆ ಎದುರು, ಸೀತಮ್ಮ ಕಾಲೇಜ್ ಹತ್ತಿರ, 1ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.

ತಮ್ಮ ಸೇವಾಕಾಂಕ್ಷಿಗಳು :
✦ ಲೋಕಿಕೆರೆ ಸಿದ್ದಪ್ಪ ಟಿ.ಹೆಚ್, ✦ ಸಂಗೇಗೌಡ ಎಸ್.
✦ ಚಂದ್ರಶೇಖರ್ ಬಿ. ✦ ಚೌಡಪ್ಪ ಪಿ. ✦ ಜಯಪ್ಪ ಎಂ.
✦ ಶ್ರೀಮತಿ ಭಾಗ್ಯಮ್ಮ ಡಿ.ಬಿ. ✦ ರುದ್ರಪ್ಪ ಹೆಚ್.ಎಂ. ✦ ಶಫೀ ಅಹ್ಮದ್
✦ ಸಕ್ರನಾಯ್ಕ್, ✦ ಡಾ. ಸಿದ್ದಪ್ಪ ಕೆ. ✦ ಶ್ರೀಮತಿ ಸುಧಾ ಕೆ.

# ಸಾವರ್ಕರ್ ಕುರಿತ ಖರ್ಗೆ ಹೇಳಿಕೆ ಖಂಡಿಸಿ ಮಹಾರಾಷ್ಟ್ರದಲ್ಲಿ ಪ್ರತಿಭಟನೆ

## ರಾಹುಲ್ ಗಾಂಧಿ ಸ್ಪಷ್ಟನೆ ನೀಡಲು ಬಿಜೆಪಿ ಶಾಸಕರ ಒತ್ತಾಯ

ನಾಗಪುರ, ಡಿ. 8 – ಹಿಂದುತ್ವ ವಿಚಾರ ವಾದಿ ವಿ.ಡಿ. ಸಾವರ್ಕರ್ ಅವರ ಭಾವಚಿತ್ರ ವನ್ನು ವಿಧಾನಸಭೆಯಿಂದ ತೆಗೆದು ಹಾಕುವ ಕುರಿತು ಕರ್ನಾಟಕದ ಸಚಿವ ಪ್ರಿಯಾಂಕ್ ಖರ್ಗೆ ನೀಡಿರುವ ಹೇಳಿಕೆ ವಿರುದ್ಧ ಮಹಾರಾಷ್ಟ್ರದಲ್ಲಿ ಬಿಜೆಪಿ ಹಾಗೂ ಯುವ ದಳ ಪ್ರತಿಭಟನೆ ನಡೆಸಿವೆ.

ತಮಗೆ ಅವಕಾಶ ನೀಡಿದರೆ ಭಾವಚಿತ್ರ ತೆಗೆದು ಹಾಕುವುದಾಗಿ ಹೇಳಿದ್ದ ಖರ್ಗೆ, ಸಾವರ್ಕರ್ ಅವರಿಗೆ ವೀರ ಎಂಬ ಬಿರುದು ಕೊಟ್ಟವರು ಯಾರು? ಬಿಜೆಪಿಯವರಿಗೆ ಗೊತ್ತಿದ್ದರೆ ಹೇಳಲಿ. ಸಾವರ್ಕರ್ ಬ್ರಿಟಿಷರಿಂದ ಪಿಂಚಣಿ ಪಡೆಯುತ್ತಿದ್ದರೇ ಇಲ್ಲವೇ? ಅವರು ಬ್ರಿಟಿಷ್ ಸರ್ಕಾರಕ್ಕೆ ಐದಾರು ಬಾರಿ ಕ್ಷಮಾಪಣೆ ಪತ್ರ ಬರೆದಿದ್ದರೇ ಇಲ್ಲವೇ? ಅವರು ಕುಟುಂಬ ಕ್ಷಮಾಪಣೆ ಪತ್ರ ಬರೆದಿತ್ತೇ ಇಲ್ಲವೇ? ಎಂದು ಪ್ರಶ್ನಿಸಿದ್ದರು.

ಅವರ ಹೇಳಿಕೆಗಳನ್ನು ಖಂಡಿಸಿರುವ ಮಹಾರಾಷ್ಟ್ರ ಬಿಜೆಪಿ ಶಾಸಕರು, ನಾಗಪುರದ ವಿಧಾನ ಭವನದ ಎದುರು ಪ್ರತಿಭಟನೆ ನಡೆಸಿದ್ದಾರೆ. ನಾಗಪುರದಲ್ಲಿ ಮಹಾರಾಷ್ಟ್ರ ವಿಧಾನಸಭೆಯ ಚಳಿಗಾಲದ ಅಧಿವೇಶನ ನಡೆಯುತ್ತಿದೆ.

ಖರ್ಗೆ ನೀಡಿರುವ ಹೇಳಿಕೆಯ ಬಗ್ಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಶಿವಸೇನೆ (ಯು.ಬಿ.ಟಿ.) ಮುಖ್ಯಸ್ಥ ಉದ್ಧವ್ ಠಾಕ್ರೆ ಸ್ಪಷ್ಟನೆ ನೀಡಬೇಕೆಂದು ಶಾಸಕರು ಒತ್ತಾಯಿಸಿದ್ದಾರೆ.

ಮುಂಬೈ, ನಾಸಿಕ್ ಹಾಗೂ ಥಾಣೆಗಳಲ್ಲಿ ಬಿಜೆಪಿಯ ಯುವ ವಿಭಾಗವಾದ ಬಿ.ಜೆ.ವೈ.ಎಂ. ಪ್ರತಿಭಟನೆ ನಡೆಸಿದೆ.

ಸಾವರ್ಕರ್ ಅವರನ್ನು ಕಾಂಗ್ರೆಸ್ ದ್ವೇಷಿಸುವುದು ಎಲ್ಲರಿಗೂ ಗೊತ್ತಿದೆ. ಉದ್ಧವ್ ಠಾಕ್ರೆ ಹಾಗೂ ಶಿವಸೇನೆ (ಯು.ಬಿ.ಟಿ.) ನಾಯಕ ಸಂಜಯ್ ರಾವತ್ ಅವರು ತಮ್ಮ ನಿಲುವು ಸ್ಪಷ್ಟಪಡಿಸಬೇಕು ಎಂದು ಬಿ.ಜೆ.ವೈ.ಎಂ. ನಾಸಿಕ್ ನಗರ ಘಟಕದ ಅಧ್ಯಕ್ಷ ಸಾಗರ್ ಶೆಲರ್ ಒತ್ತಾಯಿಸಿದ್ದಾರೆ.

## ದಾವಣಗೆರೆಯಲ್ಲಿ ನಡೆದಿದ್ದ 'ತುಂಬಿದ ಕೊಡ' ಚಿತ್ರದ ಚಿತ್ರೀಕರಣದಲ್ಲಿ ಲೀಲಾವತಿ


ಪಿ.ಜೆ.ಬಡಾವಣೆಯ ರಾಮಮಂದಿರದ ಎದುರು ಪಾದಚಾರಿ ಲೀಲಾವತಿ.


ಪಿ.ಬಿ.ರಸ್ತೆಯ ರಾಜನಹಳ್ಳಿ ಹನುಮಂತಪ್ಪನವರ ಛತ್ರದ ಮುಂದೆ ಪಾದಚಾರಿ ಲೀಲಾವತಿ.


ದಾವಣಗೆರೆ ನಗರಸಭೆಯ ಎದುರು ಪಾದಚಾರಿ ಲೀಲಾವತಿ.

ಶುಕ್ರವಾರ ನಿಧನರಾದ ಹಿರಿಯ ಚಿತ್ರ ನಟಿ ಲೀಲಾವತಿ ಅವರು 'ತುಂಬಿದ ಕೊಡ' ಚಲನಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ ದಾವಣಗೆರೆಗೆ ಆಗಮಿಸಿದ್ದರು. ದಾವಣಗೆರೆ ನಗರಸಭೆಯ ಎದುರು, ರಾಜನಹಳ್ಳಿ ಹನುಮಂತಪ್ಪನವರ ಛತ್ರದ ಎದುರು, ಪಿ.ಜೆ. ಬಡಾವಣೆಯ ಖಮಿತ್ಕರ್ ಈಶ್ವರಪ್ಪ ರಾಮ ದೇವಸ್ಥಾನದ ಎದುರು, ಹಳೇ ನಗರದ ಸರ್ಕಾರಿ ಆಸ್ಪತ್ರೆ ಎದುರು ಲೀಲಾವತಿ ಅವರು ನಡೆದು ಬರುವ ದೃಶ್ಯ ಹಾಗೂ ಅಲ್ಲೇ ಸಮೀಪದ ಚಾಮರಾಜ ವೃತ್ತದಲ್ಲಿ ಜಯಂತಿಯವರು ಚಲಾಯಿಸುತ್ತಿದ್ದ ಕಾರಿಗೆ ಲೀಲಾವತಿ ಅವರು ಎದುರಾಗಿ ಬೀಳುವ ದೃಶ್ಯ ಎಲ್ಲವೂ ಚಿತ್ರೀಕರಣವಾಗಿತ್ತು.

ನಾನು ಆಗ ಇದನ್ನೆಲ್ಲ ನೋಡಿದ್ದೆ. ಈ ಚಿತ್ರಕ್ಕಾಗಿ ಜನಪ್ರಿಯ ಹಾಡು 'ಅಂತಿಂಥ ಹೆಣ್ಣು ನೀನಲ್ಲ, ನಿನ್ನಂತ ಹೆಣ್ಣು ಇನ್ನಿಲ್ಲ....' ಎನ್ನುವುದನ್ನು ಪಿ. ಕಾಳಿಂಗರಾಯರು ಹಾಡಿರುವುದು. ಈ ಚಲನಚಿತ್ರದಲ್ಲಿ ಲೀಲಾವತಿ ಜೊತೆ ರಾಜಕುಮಾರ್, ಜಯಂತಿ ಹಾಗೂ ದಾವಣಗೆರೆಯ ಹಿರಿಯ ರಂಗಭೂಮಿ ಕಲಾವಿದೆ ಚಿಂದೋಡಿ ಲೀಲಾ ಮುಂತಾದವರು ಪ್ರಧಾನ ಭೂಮಿಕೆಯಲ್ಲಿ ನಟಿಸಿದ್ದರು.

ಬಿಹಾರ ಕ್ಷಾಮ ನಿವಾರಣಾ ನಿಧಿ ಸಂಗ್ರಹಕ್ಕೆ ಕನ್ನಡ ಚಲನಚಿತ್ರ ಕಲಾವಿದರು ದಾವಣಗೆರೆಗೆ ಬಂದಾಗಲೂ ಲೀಲಾವತಿ ಅವರೂ ಬಂದಿದ್ದರು. ರಾಜಕುಮಾರ್, ಜಯಂತಿ, ನರಸಿಂಹರಾಜು, ಬಾಲಕೃಷ್ಣ, ಪಂಡರಿಬಾಯಿ ಮುಂತಾದವರೆಲ್ಲಾ ಬಂದಿದ್ದರು.

**- ಹೆಚ್.ಬಿ.ಮಂಜುನಾಥ,**
ಹಿರಿಯ ಪತ್ರಕರ್ತ, ದಾವಣಗೆರೆ.

## ಲೀಲಾವತಿಗೆ ನಮನ



ಶ್ರದ್ಧಾಂಜಲಿ ನಿಮಗೆ
ಶಾರದ್ಧಾಂಜಲಿ
ಲೀಲಾವತಿ ನಿಮಗೆ
ಶ್ರದ್ಧಾಂಜಲಿ

ನಾಯಕಿಯಾಗಿ
ಮಿಂಚಿ ತೆರೆಮೇಲೆ
ನಾಯಕನ ತಾಯಿಯಾಗಿ ಹೊಳೆದಿರಿ
ನಯನದಲ್ಲಿ ಎಲ್ಲಾ ಭಾವಗಳ ತುಂಬಿ
ನಯವಾದ ಅಭಿನಯದ ತಾರೆಯಾದಿರಿ

ಹೆಣ್ಣಿನ ಕಷ್ಟಗಳ ಸಲೀಸಾಗಿ ತೋರಿಸುತ
ಕಣ್ಣೀರ ಧಾರೆಯನು ಸುರಿಸಿ ಅಳಿಸುವ
ಬಣ್ಣದ ಬದುಕಿನಲಿ ಕಷ್ಟ ಸುಖ ಕಾಣುತ
ಕಣ್ಣ ರೆಪ್ಪೆಯಂತೆ ಮಗನ ಪೊರೆಯುತ

ಬಡಬಗ್ಗಿಯಾದರೂ ಶ್ರೀಮಂತೆಯಾದರೂ
ಸಡಗರದ ಅಭಿನಯವ ಮಾಡಿ ತೋರಿದಿರಿ
ಒಡವೆ ವಸ್ತ್ರವ ತೊಟ್ಟು ರಾಣಿಯೂ ಆದಿರಿ
ಪಿಡಿದು ತ್ರಿಶೂಲ ದೇವಿಯೂ ಆದಿರಿ

ಕಲಾವಿದಗೆ ಪಾತ್ರ ಯಾವುದಾದರೇನು
ಕಲೆಗೆ ಗೌರವ ಎಂಬ ಸತ್ಯ ಸಾರಿದಿರಿ
ನಲಿವ ನಿಮ್ಮಯ ನಗುವು ಸದಾ ನೆನಪಿರಲಿ
ಎಲ್ಲೆ ಇಲ್ಲದ ಸುಖ ಸಿರಿಹರಿ ನೀಡಲಿ

**- ಶ್ರೀ ಕೃಷ್ಣಾರ್ಪಣಮಸ್ತು**
**ರೂಪಶ್ರೀ ಶಶಿಕಾಂತ್**

# ಭಾರತದಲ್ಲಿರುವ ಸಂಸ್ಕೃತಿ, ವೈವಿಧ್ಯತೆ, ಸಾಮರಸ್ಯ ಬೇರೆ ಯಾವ ದೇಶದಲ್ಲೂ ಇಲ್ಲ


ಕೊಕ್ಕನೂರು : ಎನ್ನೆಸ್ಸೆಸ್ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಎನ್ನೆಸ್ಸೆಸ್ ಸಂಯೋಜನಾಧಿಕಾರಿ ಅಶೋಕ್ ಪಾಳೇದ ಅಭಿಮತ

ಮಲೇಬೆನ್ನೂರು, ಡಿ.8- ನಮ್ಮ ತಂದೆ-ತಾಯಿ ಸೇರಿದಂತೆ ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್ ನಮಗೆ ಮಾದರಿಯಾಗಬೇಕೇ ಹೊರತು ಸಿನಿಮಾ ನಟರಲ್ಲ ಎಂದು ದಾವಣಗೆರೆ ವಿಶ್ವವಿದ್ಯಾಲಯದ ಎನ್ನೆಸ್ಸೆಸ್ ಸಂಯೋಜನಾಧಿಕಾರಿ ಅಶೋಕ್ ಕುಮಾರ್ ಪಾಳೇದ ವಿದ್ಯಾರ್ಥಿಗಳಿಗೆ ಹೇಳಿದರು.

ಅವರು, ಶುಕ್ರವಾರ ಸಂಜೆ ಕೊಕ್ಕನೂರು ಗ್ರಾಮದ ಶ್ರೀ ಪವನದೇವ ಕಲ್ಯಾಣ ಮಂಟಪದಲ್ಲಿ ಹರಿಹರದ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಪದವಿ ಮಹಾವಿದ್ಯಾಲಯ (ಎಸ್‌ಜೆವಿಪಿ) ಮತ್ತು ಸ್ನಾತಕೋತ್ತರ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ 7 ದಿನಗಳ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ವಿಶೇಷ ಆಹ್ವಾನಿತರಾಗಿ ಮಾತನಾಡಿದರು.

ಭವಿಷ್ಯದ ಸುಭದ್ರ ದೇಶ ಕಟ್ಟಲು ನೀವು ಆದರ್ಶ ಮಹನೀಯರ ಬಗ್ಗೆ ತಿಳಿದು ಕೊಳ್ಳಬೇಕು. ನಮ್ಮ ದೇಶದ ಶ್ರೀಮಂತ ಸಂಸ್ಕೃತಿ ಬಗ್ಗೆ ಎಷ್ಟು ಹೇಳಿದರೂ ಕಡಿಮೆ. ಏಕೆಂದರೆ ಭಾರತದಲ್ಲಿರುವ ವೈವಿಧ್ಯತೆ, ಸಾಮರಸ್ಯ ಬೇರೆ ಯಾವ ದೇಶದಲ್ಲೂ ಇಲ್ಲ. ರೈತರು, ಸೈನಿಕರು, ಶ್ರಮಿಕರು ಹಾಗೂ ಯುವ ಜನತೆಯಿಂದಾಗಿ ನಮ್ಮ ದೇಶ ಸುರಕ್ಷಿತವಾಗಿದ್ದು, ಎನ್ನೆಸ್ಸೆಸ್ ಶಿಬಿರಗಳು ಬದುಕನ್ನು, ದೇಶವನ್ನು ಪ್ರೀತಿಸುವುದನ್ನು ಕಲಿಸುತ್ತವೆ.

ಮಹಾತ್ಮ ಗಾಂಧೀಜಿ ಅವರ 100ನೇ ಜನ್ಮದಿನಾಚರಣೆ ಸವಿನೆನಪಿಗಾಗಿ ಮತ್ತು ಗಾಂಧೀಜಿಯವರ ಚಿಂತನೆ ಜಾರಿಗೊಳಿಸುವ ಉದ್ದೇಶದಿಂದ 1969ರಲ್ಲಿ ಅಂದಿನ ಕೇಂದ್ರ ಸರ್ಕಾರದ ಶಿಕ್ಷಣ ಸಚಿವ ಡಾ. ವಿ.ಆರ್.ವಿ. ರಾವ್ ಅವರು, 'ರಾಷ್ಟ್ರ ಸೇವೆಗೆ ಸದಾಸಿದ್ಧ, ನನಗಲ್ಲ-ನಿನಗೆ' ಎಂಬ ಧ್ಯೇಯದೊಂದಿಗೆ ಈ ಎನ್ನೆಸ್ಸೆಸ್ ಶಿಬಿರವನ್ನು ದೇಶದಲ್ಲಿ ಜಾರಿಗೆ ತಂದರು.

ಎಸ್‌ಜೆವಿಪಿ ವಿದ್ಯಾಸಂಸ್ಥೆಯ ಸಾಮಾನ್ಯ ಸಭೆಯ ಸದಸ್ಯ ಮಲೇಬೆನ್ನೂರಿನ ಕೆ.ಎಸ್. ಮಂಜಪ್ಪ ಅವರು, ಶಿಬಿರವನ್ನು ಉದ್ಘಾಟಿಸಿ ಶುಭ ಕೋರಿದರು. ಗ್ರಾ.ಪಂ. ಮಾಜಿ ಅಧ್ಯಕ್ಷ ಓ.ನಿಂಗನಗೌಡ, ಕಾಲೇಜಿನ ಹಿಂದಿ ವಿಭಾಗದ ಮುಖ್ಯಸ್ಥ ರಮೇಶ್ ಕೆ.ಪರ್ವತಿ, 'ಜನತಾವಾಣಿ' ಹಿರಿಯ ವರದಿಗಾರ ಜಿಗಳಿ ಪ್ರಕಾಶ್ ಮಾತನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ. ಎನ್. ಹೆಚ್.ಶಿವಗಂಗಮ್ಮ ಮಾತನಾಡಿ, ಜೀವನದಲ್ಲಿ ಶಿಸ್ತು ಇದ್ದರೆ ಎಲ್ಲವೂ ನಿಮಗೆ ಸಿಗಲಿದೆ ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಶಿಬಿರದ ಕಾರ್ಯಕ್ರಮಾಧಿಕಾರಿ ಪ್ರೊ. ಎಸ್.ವಿ.ಸಿದ್ದಯ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ಸ್ವಯಂ ಸೇವಕ ವಿದ್ಯಾರ್ಥಿ ಎನ್.ಜಿ.ನಾಗರಾಜ್ ಪ್ರತಿಜ್ಞಾ ವಿಧಿ ಬೋಧಿಸಿದರು.

ಉಪನ್ಯಾಸಕರಾದ ನಿಖಿತಾ, ವಿಶಾಲ್ ಬೆಂಚಳ್ಳಿ, ಟಿ.ಭರಮಪ್ಪ, ವಿವಿಧ ಕಾಲೇಜು ಶಿಬಿರಾಧಿಕಾರಿಗಳಾದ ಅಣ್ಣೇಶ್, ಮಂಜುನಾಥ್, ವಿಶ್ವನಾಥ್ ಮತ್ತು ದೇವರಬೆಳಕೆರೆಯ ಎನ್.ಪಿ.ವೀರೇಶ್ ವೇದಿಕೆಯಲ್ಲಿದ್ದರು.

ಶಿಬಿರಾರ್ಥಿ ಪೂಜಾ ಸ್ವಾಗತಿಸಿದರು. ಕಾವ್ಯ ನಿರೂಪಿಸಿದರೆ, ಇನ್ನೋರ್ವ ಕಾರ್ಯಕ್ರಮಾಧಿಕಾರಿ ಪ್ರೊ. ಮಂಜುನಾಥ್ ಸಜ್ಜನ್ ವಂದಿಸಿದರು.

# ಇನ್ವೆಸ್ಟ್ ಕರ್ನಾಟಕದಿಂದ 5.41 ಲಕ್ಷ ಕೋಟಿ ರೂ. ಹೂಡಿಕೆಗೆ ಒಡಂಬಡಿಕೆ

ಬೆಳಗಾವಿ, ಡಿ. 8 - 2022ರ ನವೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಸಿದ 'ಇನ್ವೆಸ್ಟ್ ಕರ್ನಾಟಕ' ಸಮಾವೇಶದ ಮೂಲಕ 57 ಕಂಪನಿಗಳೊಂದಿಗೆ 5,41,369 ಕೋಟಿ ರೂ.ಗಳ ಹೂಡಿಕೆಗೆ ಸರ್ಕಾರವು ಒಡಂಬಡಿಕೆ ಮಾಡಿಕೊಂಡಿದೆ ಎಂದು ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.

ವಿಧಾನಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಎಂ. ಚಂದ್ರಪ್ಪ ಅವರು ಕೇಳಿದ ಪ್ರಶ್ನೆಗೆ ಸಚಿವರು, ಇದೇ ರೀತಿಯಲ್ಲಿ, ಹುಬ್ಬಳ್ಳಿಯಲ್ಲಿ ನಡೆಸಲಾದ ಎಫ್‌ಎಂಸಿಜಿ ಹೂಡಿಕೆದಾರರ ಸಮಾವೇಶದ ಮುಖಾಂತರ 16 ಕಂಪನಿಗಳೊಂದಿಗೆ ರಾಜ್ಯದಲ್ಲಿ 1,275 ಕೋಟಿ ರೂ. ಬಂಡವಾಳ ಹೂಡಿಕೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು.

ಇನ್ವೆಸ್ಟ್ ಕರ್ನಾಟಕದಲ್ಲಿ ಕುದುರಿಸಲಾದ ಒಡಂಬಡಿಕೆಗಳ ಪೈಕಿ 7 ಯೋಜನೆಗಳಿಗೆ ಏಕಗವಾಕ್ಷಿ ಸಮಿತಿಯಲ್ಲಿ ಅನುಮೋದನೆ ನೀಡಲಾಗಿದ್ದು, ಇವುಗಳಿಗೆ ಭೂಮಿ, ನೀರು ಮತ್ತು ವಿದ್ಯುತ್ ಪೂರೈಕೆ ಒದಗಿಸಲಾಗುವುದು. ಇವು ಬೃಹತ್ ಯೋಜನೆಗಳಾದ್ದರಿಂದ ಕಾರ್ಯಾರಂಭ ಮಾಡಲು 3-4 ವರ್ಷಗಳು ಹಿಡಿಯುತ್ತವೆ ಎಂದು ಅವರು ವಿವರಿಸಿದ್ದಾರೆ.

ಎಫ್‌ಎಂಸಿಜಿ ಸಮಾವೇಶದಲ್ಲಾದ 16 ಒಡಂಬಡಿಕೆಗಳ ಪೈಕಿ 3 ಯೋಜನೆಗಳಿಗೆ ಏಕಗವಾಕ್ಷಿ ವ್ಯವಸ್ಥೆ ಮೂಲಕ ಅನುಮೋದನೆ ಕೊಡಲಾಗಿದ್ದು, ಇವುಗಳಿಗೂ ಮೂಲಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ. ಮೇಲ್ಕಂಡ ಎರಡೂ ಬಗೆಯ ಯೋಜನೆಗಳು ಅನುಷ್ಠಾನದ ನಾನಾ ಹಂತಗಳಲ್ಲಿವೆ ಎಂದು ಅವರು ತಿಳಿಸಿದರು.

ಇನ್ವೆಸ್ಟ್ ಕರ್ನಾಟಕ-2022 ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಹಿಂದಿನ ಸರ್ಕಾರವು 74.99 ಕೋಟಿ ರೂ. ವೆಚ್ಚ ಮಾಡಿದೆ. ಹಾಗೆಯೇ, ಹುಬ್ಬಳ್ಳಿಯಲ್ಲಿ 2022ರ ನವೆಂಬರ್‌ನಲ್ಲಿ ನಡೆಸಲಾದ ಹೂಡಿಕೆದಾರರ ಸಮಾವೇಶಕ್ಕೆ 12.23 ಲಕ್ಷ ರೂ.ಗಳನ್ನು ಸರ್ಕಾರದ ವತಿಯಿಂದ ಖರ್ಚು ಮಾಡಲಾಗಿದೆ ಎಂದು ಪಾಟೀಲ ವಿವರಿಸಿದರು.

ಜೊತೆಗೆ, ಸರ್ಕಾರದ ನಿಯಮಾವಳಿಗಳ ಪ್ರಕಾರ ಈ ಉದ್ಯಮಗಳಲ್ಲಿ 'ಡಿ' ಗ್ರೂಪ್ ಹುದ್ದೆಗಳನ್ನು ಕನ್ನಡಿಗರಿಗೆ ಶೇಕಡ 100ರಷ್ಟು ಮತ್ತು ಒಟ್ಟಾರೆಯಾಗಿ ಶೇ.70ರಷ್ಟು ಉದ್ಯೋಗಗಳನ್ನು ಸ್ಥಳೀಯರಿಗೆ ಕೊಡಬೇಕೆನ್ನುವ ನಿಯಮ ರೂಪಿಸಲಾಗಿದೆ ಎಂದು ಸಚಿವರು ಹೇಳಿದ್ದಾರೆ.

## ಚಳ್ಳಕೆರೆಯಲ್ಲಿ ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ



ಚಳ್ಳಕೆರೆ, ಡಿ. 8- ಇಲ್ಲಿನ ಕೃಷ್ಣರಾಜೇಂದ್ರ ಶಾಖಾ ಗ್ರಂಥಾಲಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ ಆಚರಿಸಲಾಯಿತು.

ಮೈತ್ರಿ ದ್ಯಾಮಯ್ಯ ಡಾ. ಬಿ.ಆರ್. ಅಂಬೇಡ್ಕರ್ ಕುರಿತು ಮಾತನಾಡಿ, ಲೈಬ್ರರಿ ಓದುಗರು ಬಾಬಾ ಸಾಹೇಬ್‌ರ ಪುಸ್ತಕಗಳನ್ನು ಓದಿ ಜ್ಞಾನವಂತರಾಗಬೇಕು ಎಂದು ತಿಳಿಸಿದರು.

ಜಿಲ್ಲಾ ಗ್ರಂಥಾಲಯ ಅಧಿಕಾರಿ ಪಿ.ಆರ್. ತಿಪ್ಪೇಸ್ವಾಮಿ ಮಾತನಾಡಿ, ಅತಿ ಹೆಚ್ಚು ಓದುಗರು ಬಡವರಾಗಿದ್ದು, ಲೈಬ್ರರಿಗೆ ಬಂದು ಬುದ್ಧಿವಂತರಾಗಿ, ತಂದೆ ತಾಯಿಗೆ ಹೆಸರು ತರಬೇಕು ಎಂದು ತಿಳಿಸಿದರು. ತಾಲ್ಲೂಕು ಲೈಬ್ರರಿ ಅಧಿಕಾರಿ ಡಿ. ತಿಮ್ಮರಾಯ, ಪತ್ರಕರ್ತ ಟಿ.ತಿಪ್ಪೇಸ್ವಾಮಿ, ತಿಪ್ಪೇರುದ್ರಪ್ಪ, ಇ. ವೀರಭದ್ರಪ್ಪ ಚಾಳೂರು, ಸಿಬ್ಬಂದಿ ವರ್ಗದವರಾದ ಮಾರುತಿ, ರೂಪ ಮತ್ತಿತರರು ಉಪಸ್ಥಿತರಿದ್ದರು.

## ಪರಮಾತ್ಮನೇ ಜ್ಯೋತಿರ್ಲಿಂಗ

(1ನೇ ಪುಟದಿಂದ) ಅಜನ್ಮನು, ಅಯೋಜನಿಜನು, ಅಕಾಯನು, ಅಶರೀರನು ಎಂದು ವಿವರಿಸಿದ ಅವರು, ರಸ್ತೆ, ವಾಹನ ಸೌಲಭ್ಯಗಳಿಲ್ಲದ ಕಾಲದಲ್ಲಿ ಜ್ಯೋತಿರ್ಲಿಂಗಗಳ ದರ್ಶನ ಕಷ್ಟ ಸಾಧ್ಯವಾದ್ದರಿಂದ ಗ್ರಾಮಗಳಲ್ಲಿ ಶಿವನ ದೇವಾಲಯಗಳನ್ನು ನಿರ್ಮಿಸಲಾಯಿತು. ಆ ದೇವಾಲಯಗಳಲ್ಲಿರುವ ಎಲ್ಲಾ ಲಿಂಗಗಳೂ ಜ್ಯೋತಿರ್ಲಿಂಗವೇ ಎಂದು ಪ್ರತಿಪಾದಿಸಿದರು.

ಶರಣರ ಮೌಲ್ಯಗಳನ್ನು ಜೀವನದಲ್ಲಿ ಧರಿಸಿ ದವರನ್ನು ಶರಣರು ಎನ್ನಲಾಗುತ್ತದೆ. ಅವರು ಶಿವನ ಗುಣಗಳಿಗೆ ಶರಣರಿರುವಂತಹವರು. ಶರಣರು ಶಿವ ಶರಣರಾಗಬೇಕು. ಆಗ ಅವರನ್ನು ಶಿವಯೋಗಿಗಳು ಎಂತಲೂ ಹೇಳಬಹುದು. ಶಿವನನ್ನು ಅರಿಯದೇ, ಶಿವನ ಬಗ್ಗೆ ಬೇರೆಯವರಿಗೆ ತಿಳಿಸದೇ ಇದ್ದರೆ, ಅವರು ಶಿವಶರಣರಾಗುವುದಿಲ್ಲ ಎಂದು ಹೇಳಿದರು.

ಜ್ಯೋತಿ ಸ್ವರೂಪನಾದ ಶಿವನನ್ನು ಅರಿಯ ಲೆಂದೇ ಹನ್ನೆರಡನೇ ಶತಮಾನದಲ್ಲಿ ಅನುಭವ ಮಂಟದಲ್ಲಿ ಶಿವಾನುಭವಾದ ಗೋಷ್ಠಿಗಳು, ಆತ್ಮಾನುಭವಾದ ಗೋಷ್ಠಿಗಳು ನಿಖರವಾಗಿ ನಡೆಯುತ್ತಿದ್ದವು ಎಂದು ತಿಳಿಸಿದರು.

ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಸಂಸ್ಥೆಯ ವಿದ್ಯಾನಗರ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಗೀತಾಜಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದರು.

**ನೇರ ಪ್ರಸಾರ :** ಸುದೀರ್ಘ ಒಂದು ತಿಂಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 7.30ರವರೆಗೆ 1 ಗಂಟೆ ಸಮಯ ನಡೆಯುವ ಈ ಪ್ರವಚನವನ್ನು ನೇರ ಪ್ರಸಾರ ವೀಕ್ಷಿಸಲು ಯು ಟ್ಯೂಬ್ ಚಾನಲ್ಲಾದ ರಾಜಯೋಗ ಟಿವಿ ಕನ್ನಡದಲ್ಲಿ (youtube/rajayogatvkannada) ವೀಕ್ಷಿಸಬಹುದು.


**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 30x40 ಉತ್ತರ, 30x40 ದಕ್ಷಿಣ, 20x30 ಪೂರ್ವ, ಈ ಮೂರೂ ಸೈಟ್ ಸೇರಿ 91 ಲಕ್ಷ. ಕಿರಣ್ ಭೂಸನೂರ್ (ಏಜೆಂಟ್) 98440-63409, 97315-63409 (ಕಮೀಷನ್ ಇಲ್ಲ +ರಿಜಿಸ್ಟರ್ ಖರ್ಚು ಸೇರಿ)

**ಸೈಟ್ ಮಾರಾಟಕ್ಕೆ**
ಆಂಜನೇಯ ಬಡಾವಣೆ ಕಿರಣ್ ಭೂಸನೂರ್ (ಏಜೆಂಟ್) 98440-63409, 97315-63409 ಸೈಟ್ : ಉತ್ತರ 30x55.5 ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ ಕೇವಲ ಅರ್ಧ ಪರ್ಸೆಂಟ್ (1/2%) ಕಮೀಷನ್ ನನ್ನದು

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x40 ಪಶ್ಚಿಮ ಅಕ್ಕ-ಪಕ್ಕ, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪಶ್ಚಿಮ, ವಿನಾಯಕ ಬಡಾವಣೆಯಲ್ಲಿ 30x35 ದಕ್ಷಿಣ, ಶಿವಕುಮಾರ ಸ್ವಾಮಿ ಬಡಾವಣೆ 1ನೇ ಹಂತದಲ್ಲಿ 30x40 ಪೂರ್ವ. ಸ್ವಾಮಿ ಏಜೆಂಟ್, ವಿದ್ಯಾನಗರ 97421 44715

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ 99863 61250 91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು. 99863 61250, 80730 24690

**ಮನೆ ಬಾಡಿಗೆಗೆ ಇದೆ**
ವಿನೋಬನಗರ 1ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಶಂಭುಲಿಂಗ ಟೆಂಪಲ್ ಎದುರು ಮೊದಲನೇ ಮಹಡಿಯಲ್ಲಿ, 2 ಬೆಡ್ ರೂಂ ಮುನ್ಸಿಪಲ್ ಹಾಗೂ ಬೋರ್ ವೆಲ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ : 98804 38541, 89041 34197

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ**
ಎಸ್.ಎಸ್. ಮಾಲ್ ಹತ್ತಿರ, ದಾವಣಗೆರೆ. 78929 94856

**ಸುಸಜ್ಜಿತ ಹೋಟೆಲ್ ಕೊಡುವುದಿದೆ**
ದಾವಣಗೆರೆಯ ಪ್ರತಿಷ್ಠಿತ ಬಡಾವಣೆಯಲ್ಲಿ ವೆಜ್ ಅಂಡ್ ನಾನ್ ವೆಜ್ ಹೋಟೆಲ್, ತಿಂಡಿ ತಿನಿಸುಗಳು, ಚಾಟ್ಸ್, ಕೆಫೆ ತಕ್ಷಣ ನಡೆಸಿಕೊಂಡು ಹೋಗಲು ಎಲ್ಲಾ ಅನುಕೂಲತೆಯುಳ್ಳ ಹೋಟೆಲ್ ಮಾರಾಟಕ್ಕಿದೆ. (ಕಟ್ಟಡ ಹೊರತುಪಡಿಸಿ) ಸಂಪರ್ಕಿಸಿ: 77600 05504 / 99864 45843 Whatsapp : 8105676876

**ಬೇಕರಿ - ಬಾಡಿಗೆಗಿದೆ**
ಬೇಕರಿ ಉತ್ಪನ್ನಗಳನ್ನು ಮಾಡುವ, ಕುಕ್ಕಿಂಗ್ ಮಷಿನ್, ಓವನ್, ಜನರೇಟರ್, ಹಿಟ್ಟು ಕಲಸುವ ಯಂತ್ರಗಳೊಂದಿಗೆ ಜಾಗ ಸಹಿತ ಬಾಡಿಗೆಗಿದೆ. ಸಂಪರ್ಕಿಸಿ : 94491-76944, 90084-94427

**ಸಿಂಗಲ್ ಬೆಡ್ ರೂಮ್ ಮನೆ ಬಾಡಿಗೆಗೆ ಇದೆ**
(ಮೊದಲನೇ ಮಹಡಿ) ಎಸ್.ಎಸ್. ಲೇಔಟ್ 'ಎ' ಬ್ಲಾಕ್, 17ನೇ ಕ್ರಾಸ್. ಸಂಪರ್ಕಿಸಿ : 99725 91568

**ಬೇಕಾಗಿದ್ದಾರೆ**
ಪ್ಯಾಕೇಜಿಂಗ್ ಇಂಡಸ್ಟ್ರೀಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳವಿರುತ್ತದೆ. ಕೂಡಲೇ ಸಂಪರ್ಕಿಸಿ : 99020 20461 99644 61461

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದುವಾಡ ಸೈ. ನಂ. 44 (30x50) ಪಶ್ಚಿಮ, ನೈರುತ್ಯ ಮೂಲೆ
3) ಕುಂದುವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**ಬೇಕಾಗಿದ್ದಾರೆ**
ಟೀ ಶಾಪ್ ನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ ವಿಳಾಸ: ಟೀ ಬೆಂಚ್ ಜಯನಗರ "ಎ" ಬ್ಲಾಕ್, SS ಹೈಟೆಕ್ ಹಾಸ್ಪಿಟಲ್ ರೋಡ್ ದಾವಣಗೆರೆ. 85272 86950

**3 BHK FLAT FOR SALE**
1550 sq feet fully furnished 3 BHK Apartment flat is for sale at Jayanagara 'B' Block, Davangere. 98458 73771

**ಬೇಕಾಗಿದ್ದಾರೆ**
ಕ್ಲೀನಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಭೇಟಿಯ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5ರವರೆಗೆ. ಸಂಪರ್ಕಿಸಿ: 08192 254736

**Reputed Footware Company Showroom Requires**
Sales Executive - 1 Post. Qual : SSLC / PUC Address : Liberty Shoes Ltd., Opp. SS Mall, Shamanur Road, Davanagere. 99019 44554, 98801 56060

**ಬೇಕಾಗಿದ್ದಾರೆ**
ಸೇಲ್ಸ್ / ಮಾರ್ಕೆಟಿಂಗ್ - 04 ಡಿಲೆವರಿ ಬಾಯ್ಸ್ - 03 ಅನುಭವವುಳ್ಳವರಿಗೆ ಆದ್ಯತೆ ಸಂಪರ್ಕಿಸಿ : ವಿಶ್ವಾಸ್ ಸೈಂಟಿಫಿಕ್ ಕಂ. ಹದಡಿ ರಸ್ತೆ, ದಾವಣಗೆರೆ. ಮೊ : 99000 96349

**ಮನೆ ಬಾಡಿಗೆಗೆ ಇವೆ**
2 ಮನೆಗಳು ಬಾಡಿಗೆಗೆ ಇದೆ. ಸಂಪರ್ಕಿಸಿ. 84948 20288

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಮತ್ತು ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ. ಮೇ॥ ಬಸವಶ್ರೀ ಸೋಲಾರ್ ಟೆಕ್ನಾಲಜೀಸ್ #43H, SJJM ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರೋಡ್, ದಾವಣಗೆರೆ. 99001 42052

**ಮಳಿಗೆ ಬಾಡಿಗೆಗೆ ಇದೆ**
ಡೋ.ನಂ. 80/6, ರೇಣುಕಾ ಮಂದಿರದ ಎದುರು, ಎವಿಕೆ ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, 2ನೇ ಮುಖ್ಯರಸ್ತೆಯಲ್ಲಿ ಗ್ರೌಂಡ್ ಫ್ಲೋರ್ ಹಾಗೂ ಫಸ್ಟ್ ಫ್ಲೋರ್‌ನಲ್ಲಿ ಒಟ್ಟು 650 ಚದುರಡಿ ಇರುವ ಮಳಿಗೆ ಬಾಡಿಗೆಗೆ ಇದೆ. 93422 96777

**ಸೈಟು ಮಾರಾಟಕ್ಕೆ / ಮನೆ ಬಾಡಿಗೆಗೆ**
ಸರಸ್ವತಿ ನಗರ 30x50, ಜಯನಗರ 30x40, 30x40 ಕಾರ್ನರ್, ಹೈ-ಟೆಕ್ ಹಾಸ್ಪಿಟಲ್ ಹತ್ತಿರ 30x40 ಮಾರಾಟಕ್ಕಿದೆ. ಸರಸ್ವತಿ 'ಬಿ' ಬ್ಲಾಕ್ 30x50 ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ : ಶಾಂತಪ್ಪ ಪೂಜಾರಿ ಏಜೆಂಟ್ 99647 29123

**ಮನೆ ಮಾರಾಟಕ್ಕಿದೆ**
ರಿಂಗ್ ರೋಡ್ ಪಕ್ಕ, RTO ಆಫೀಸ್ ಎದುರು, BSNL ಕಛೇರಿ ಹಿಂಭಾಗ, ಪಿಬಿ ರೋಡ್, ದಾವಣಗೆರೆ. 20x30 ಸೈಜಿನ ನೂತನ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ : 80957 77898

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ. ಸಂಪರ್ಕಿಸಿ : 85508 36642, 76191 70395

**ತಕ್ಷಣ ಬೇಕಾಗಿದ್ದಾರೆ**
ಟೆಲಿಕಾಲರ್ ಮಹಿಳೆಯರು ಅಂಗಡಿಯಲ್ಲಿ ಸಹಾಯಕರು, ಹುಡುಗ, ಹುಡುಗಿಯರು ಪಾರ್ಟ್ ಟೈಂ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. 91486 70932 79751 07268

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water) ಬೋರ್‌ವೆಲ್ ಪಾಯಿಂಟ್‌ಗಾಗಿ ಸಂಪರ್ಕಿಸಿ ಎಂ.ಟಿ. ಬಸವರಾಜು ಎಂ.ಎಸ್ಸಿ ಭೂ ವಿಜ್ಞಾನಿಗಳು 94492 02888, 86608 03384

**ಮನೆಗಳು ಬಾಡಿಗೆಗಿವೆ**
ಬಾಪೂಜಿ ಸ್ಕೂಲ್ ಹತ್ತಿರ Houses Available for Rent Near Bapuji School 63665 06433

**2 BHK HOUSE AVAILABLE FOR RENT**
Near to schools & Colleges in Taralabalu Badavane, Davangere. 94489 24389, 88617 75616

**ಕೆಲಸಕ್ಕೆ ಬೇಕಾಗಿದ್ದಾರೆ**
ಸೂಪರ್ ವೈಸರ್ & ಹೌಸ್ ಕೀಪಿಂಗ್ (ಕ್ಲೀನಿಂಗ್) ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ : 63609 76841

**ACCOUNTANT REQUIRED**
Experienced accountant Required for reputed Plywood Company in APMC YARD. Opp: DCM TOWNSHIP DAVANGERE. 94477 23005

**ಬೇಕಾಗಿದ್ದಾರೆ**
ಅಕೌಂಟೆಂಟ್ ಮ್ಯಾನೇಜರ್, ಸೇಲ್ಸ್ ಸ್ಟಾಫ್, ಗೋಡೌನ್ ಸ್ಟಾಫ್ ಸಮ್ಯಕ್ ಸೆರಾಮಿಕ್ಸ್ ಹದಡಿ ರೋಡ್, ದಾವಣಗೆರೆ. 96200 95520, 80888 92673

**SHARP WANTED**
Customer Support Engineer in Office Systems work Diploma (Ladies) Gaurav Communication Davangere. 94487 28866

**WANTED**
Female Candidate having the degree of Commerce is required to work in Auditor Office Contact : B.G. Basavarajappa # 43H, S.J.J.M. Complex, Jayadeva Circle, Hadadi Road, Dvg. 99001 42052

**ರಕ್ತ ದಾನ ಶ್ರೇಷ್ಠ ದಾನ**

**COSDERM HAIR & SKIN CARE WELLNESS CENTRE DAVANAGERE URGENTLY STAFF REQUIRED**
Counsellor, Marketing manager, Nurse's, Therapist (Male, Female), House keeping (Male, Female), Dietitian for more information 76192-57443, 81975-72499


**CHANGE OF NAME**
SAJID (old name) S/o Mohammed Saqlain Resident of # 2071,6th Cross, Basha Nagar, Davangere-577001 Dist, Karnataka has changed my name as MOHAMMED SAJEED vide affidavit dated 08.12.2023 sworn before Notary I.P Brahmakumar, Davangere, Henceforth all my transactions and dealings will be in my new name MOHAMMED SAJEED Sd/- MOHAMMED SAJEED

**ಸೈಟುಗಳು ಮಾರಾಟಕ್ಕಿವೆ**
ಚಿಗಟೇರಿ ಲೇಔಟ್ ಉತ್ತರ ಮುಖ 40x60 ಡಾಲರ್ಸ್ ಕಾಲೋನಿ, ಉತ್ತರ 30x50 ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ : 70195 81817 98864 65040

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ: 95387 77582 ಕೆಲಸ 100% ಗ್ಯಾರಂಟಿ.

**WANTED**
Female Accountant For Billing & Data Entry Qualification Any Degree SRI HARSHA ENTERPRISES # 137, `D' Block, APMC, Davanagere. Contact : 83107 61271

**ಮನೆ ಬಾಡಿಗೆಗೆ ಇದೆ**
2 BHK ಮನೆ (first Floor) ಮನೆ ನಂ. 1949/63, 20ನೇ ಕ್ರಾಸ್ ವಿದ್ಯಾನಗರದಲ್ಲಿ ಬಾಡಿಗೆಗೆ ಇದೆ. ಸಂಪರ್ಕಿಸಿ : 99003 00811

**ಲೈಂಗಿಕ ನಿಶ್ಶಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ. ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ. ಡಾ॥ ಎಚ್.ಆಯ್. ದೊಡ್ಡಮನಿ (G.R.No.8969) ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ M:9740523710

**Finance Advisor**
Full Times Job's Female. Job Role Telecaller Work time : 9.30AM to 6.30 PM & every Sunday holiday. Salary : 6,000 to 10,000 +Incentives. Qualification : 10th to 12 PUC or Degree. Age Limit : 19 to 29. Freshers & experience call or whatsapp 77959 44991, 96326 11005

**AVOID MOSQUITOES**
Mosquito Net For Doors & Windows SRI GOWRI ENTERPRISES # 7C2, 4th Cross, Near Shaneshwara Temple, Karur Industrial Area, P.B. Road, Davangere-6 72049 94628

**ಮೇಕ್ ಓವರ್ ಕ್ಲಾಸ್**
ಒಂದು ತಿಂಗಳ ತರಬೇತಿ.. ಮೇಕಪ್, ಸ್ಯಾರೀ ಡ್ರೇಪೀಂಗ್ ಮತ್ತು ಹೇರ್ ಸ್ಟೈಲ್, ಮೇಕಪ್ ಕಲಿಕೆಗೆ ಪ್ರಾಡಕ್ಟ್‌ಗಳನ್ನು ಕೊಡಲಾಗುತ್ತದೆ. ಎರಡು portfolio ಫೋಟೋ ಶೂಟ್‌ಗಳು ಹಾಗೂ ಸರ್ಟಿಫಿಕೇಟ್ ನೀಡಲಾಗುವುದು. ಸಂಪರ್ಕಿಸಿ: Glamorous Studio ಗಿರೀಜ - ಮೇಕಪ್ ಆರ್ಟಿಸ್ಟ್ 94817 76305

**PART TIME JOBS**
ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರವಣಿಗೆ ಹಾಗೂ ಫಾರಂ ಫಿಲ್ಲಿಂಗ್, ಪ್ಯಾಕಿಂಗ್, ಟೆಲಿಕಾಲಿಂಗ್, ಡಾಟಾ ಎಂಟ್ರಿ ಹಾಗೂ ಮೊಬೈಲ್ ಮೂಲಕ ತಿಂಗಳಿಗೆ 15,000 ದಿಂದ 30,000 ಸಂಪಾದಿಸಿ + (ಕೋರಿಯರ್ ಸೌಲಭ್ಯವಿದೆ) 87490 98879

**ಲೋನ್ ಕೊಡಲಾಗುವುದು**
ಹೋಮ್ ಲೋನ್, ಮನೆ ಖರೀದಿ, ಸೈಟ್ ಖರೀದಿ, ಕಮರ್ಷಿಯಲ್ ಪ್ರಾಪರ್ಟಿ ಲೋನ್, (ಲೋನ್ take over), ಮನೆ ಕಟ್ಟಲು loan ಕೊಡಲಾಗುವುದು,ಲೋನ್ ಅಮೌಂಟ್ 3 ಲಕ್ಷದಿಂದ 10 ಕೋಟಿವರೆಗೂ ಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ. (ಷರತ್ತುಗಳು ಅನ್ವಯ) 74835 24662

**ಶ್ರೀ ಸಾಯಿಬಾಬಾ ಬೋರ್‌ವೆಲ್**
350ರಿಂದ 450ರ ವರೆಗೂ ಕೊರೆಯಬಹುದು. ಮನೆ ಒಳಗೆ / ಮನೆ ಹೊರಗೆ. ದಾವಣಗೆರೆ. 99640 78484, 95906 15776

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

## ನಗರದಲ್ಲಿ ಇಂದು- ನಾಳೆ ಮಹಾವೀರ ಸಂಘದ ಸುವರ್ಣ ಮಹೋತ್ಸವ

ದಾವಣಗೆರೆ, ಡಿ.8- ನಗರದ ಕುವೆಂಪು ಕನ್ನಡ ಭವನದಲ್ಲಿ ನಾಳೆ ದಿನಾಂಕ 9 ಮತ್ತು 10 ರಂದು ಶ್ರೀ ಮಹಾವೀರ ಸಂಘದಿಂದ ಶ್ರೀ ಕಲ್ಪಧ್ರುವ ಆದಿನಾಥ ಜಿನಮಂದಿರದ ದಶಮಾನೋತ್ಸವ ಹಾಗೂ ಶ್ರೀ ಮಹಾವೀರ ಸಂಘದ ಸುವರ್ಣ ಮಹೋತ್ಸವ ಆಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಕಾರ್ಯದರ್ಶಿ ಡಿ. ಸುನೀಲ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ದಿನಾಂಕ 9 ರಂದು ಬೆಳಿಗ್ಗೆ 8 ಗಂಟೆಗೆ ಧ್ವಜಾರೋಹಣ, 8.45 ಕ್ಕೆ ಏಕಕಾಲದಲ್ಲಿ 24 ತೀರ್ಥಂಕರರಿಗೆ ವಿಶೇಷ ಕಲ್ಪಧ್ರುವ ಮಹಾಭಿಷೇಕ ಪೂಜೆ, 10.30 ಕ್ಕೆ ಶ್ರೀ ಭಕ್ತಮರ ಆರಾಧನಾ ಪೂಜೆಯು ಸಮಸ್ತ ಶ್ರಾವಕ-ಶ್ರಾವಕಿಯರಿಂದ ನಡೆಯಲಿದೆ.

ಅಂದು ಮಧ್ಯಾಹ್ನ 2.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ದಶಮಾನೋತ್ಸವ ಹಾಗೂ ಶ್ರೀ ಮಹಾವೀರ ಸಂಘದ ಸುವರ್ಣ ಮಹೋತ್ಸವದಲ್ಲಿ ಶ್ರೀ ಭುವನಕೀರ್ತಿ ಸ್ವಾಮೀಜಿ, ಧವಳಕೀರ್ತಿ ಭಟ್ಟಾರಕ ಸ್ವಾಮೀಜಿ, ದೇವೇಂದ್ರ ಕೀರ್ತಿ ಸ್ವಾಮೀಜಿ, ಭಟ್ಟಾಕಲಂಕ ಭಟ್ಟಾರಕ ಶ್ರೀ, ಸಿದ್ಧಾಂತ ಕೀರ್ತಿ ಭಟ್ಟಾರಕ ಶ್ರೀಗಳು ಸಾನ್ನಿಧ್ಯ ವಹಿಸುವರು.

ಸಂಘದ ಉಪಾಧ್ಯಕ್ಷ ಎಸ್.ಬಿ. ಜಿನದತ್ತ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶ್ರೀ ಪದ್ಮಾಂಬ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ವರ್ಷ ಹೂಲಿ, ಆದಿನಾಥ ಜೈನ್ ಮಿಲನ್ ಅಧ್ಯಕ್ಷೆ ಶ್ರೀಮತಿ ಪ್ರವೀಣ ಸುದರ್ಶನ್, ದಾವಣಗೆರೆ ಜೈನ್ ಮಿಲನ್ ಅಧ್ಯಕ್ಷ ವಿ.ಎ. ಶಾಂತರಾಜು, ಶ್ರೀ ಪಾರ್ಶ್ವನಾಥ ಟೆಂಪಲ್ ಟ್ರಸ್ಟ್ ಅಧ್ಯಕ್ಷ ಪಿ.ಬಿ. ಪ್ರಕಾಶ್, ಶ್ರೀ ಮಹಾವೀರ ಯುವ ಮಂಚ್ ಅಧ್ಯಕ್ಷ ಬಿ.ಎಸ್. ಜಿತೇಂದ್ರಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ.

ನಾಡಿದ್ದು ದಿನಾಂಕ 10 ರಂದು ಬೆಳಿಗ್ಗೆ ಧಾರ್ಮಿಕ ಸಮಾರಂಭಗಳು ನಡೆಯಲಿದ್ದು, ಮಧ್ಯಾಹ್ನ 2.30 ಕ್ಕೆ ಜರುಗುವ ಸಮಾರಂಭದಲ್ಲಿ ಎಲ್ಲಾ ಭಟ್ಟಾರಕ ಸ್ವಾಮೀಜಿಗಳು ಸಾನ್ನಿಧ್ಯವ ವಹಿಸುವರು. ಮಹಾವೀರ ಸಂಘದ ಅಧ್ಯಕ್ಷ ಬಿ.ಎಸ್. ಅಜಿತ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ. ಸುಧಾಕರ್, ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಜೈನ್ ಮಿಲನ್ ಸಂಸ್ಥೆ ರಾಷ್ಟ್ರೀಯ ಅಧ್ಯಕ್ಷ ನವದೆಹಲಿಯ ಧರ್ಮಸ್ಥಳದ ಸುರೇಂದ್ರಕುಮಾರ್, ಬೆಂಗಳೂರಿನ ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷರಾದ ಬಿ. ಪ್ರಸನ್ನಯ್ಯ, ಮಹಾವೀರ ಸಂಘದ ಗೌರವ ಅಧ್ಯಕ್ಷ ಎಂ.ಎ. ಸುದರ್ಶನ್ ಕುಮಾರ್, ಪಾಲಿಕೆಯ ಸದಸ್ಯ ಮಂಜುನಾಥ್ ಗಡಿಗುಡಾಳ್ ಭಾಗವಹಿಸಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಬಿ.ಎಸ್. ಅಜಿತ್ ಕುಮಾರ್, ಸುದರ್ಶನಕುಮಾರ್, ಎನ್.ಬಿ. ಜಿನದತ್ತ, ಚಂದ್ರಪ್ರಭು ಧರಣೇಂದ್ರ ಪ್ರಸಾದ್, ಕೋಮಲ್, ಪ್ರಶಾಂತ್, ಪ್ರೀತಮ್ ಉಪಸ್ಥಿತರಿದ್ದರು.

## ಜಿಲ್ಲೆಯಲ್ಲಿ ಇಂದು ಲೋಕ್ ಅದಾಲತ್

ದಾವಣಗೆರೆ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಇಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದೆ.

ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ಅತಿ ಹೆಚ್ಚು ಪ್ರಕರಣಗಳನ್ನು ವಿಲೇವಾರಿ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಉದ್ದೇಶಿಸಲಾಗಿದೆ. ಹೀಗಾಗಿ ದಾವಣಗೆರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲೆಗಳಲ್ಲಿರುವ ಎಲ್ಲಾ ನ್ಯಾಯಾಲಯಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಲೋಕ್ ಅದಾಲತ್ತನ್ನು ಆಯೋಜಿಸಲಿವೆ.

ಈ ಲೋಕ್ ಅದಾಲತ್ತಿನಲ್ಲಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಕಡಿಮೆ ಖರ್ಚಿನಲ್ಲಿ ಶೀಘ್ರವಾಗಿ ಪರಿಹರಿಸಿಕೊಳ್ಳಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ರಾಜೀಯಾಗಬಲ್ಲ ಎಲ್ಲಾ ಸಿವಿಲ್ ಹಾಗೂ ಕ್ರಿಮಿನಲ್ ಇತ್ಯಾದಿ ಪ್ರಕರಣಗಳನ್ನು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ದಾವಣಗೆರೆ 08192-296364, ತಾಲ್ಲೂಕು ಕಾನೂನು ಸೇವಾ ಸಮಿತಿಗಳಾದ ಹರಿಹರ 08192-296885, ಹೊನ್ನಾಳಿ 08188-251732, ಚನ್ನಗಿರಿ 08189-229195 ಮತ್ತು ಜಗಳೂರು 08196-227600 ದೂರವಾಣಿ ಗಳಿಗೆ ಸಂಪರ್ಕಿಸಬಹುದೆಂದು ಹಿರಿಯ ಸಿವಿಲ್ ನ್ಯಾಯಾ ಧೀಶರು ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಮ. ಕರೆಣ್ಣವರ ತಿಳಿಸಿದ್ದಾರೆ.

## ಹರಪನಹಳ್ಳಿಯಲ್ಲಿ ಇಂದು ಮೂಲ ಬಿಜೆಪಿ ಕಾರ್ಯಕರ್ತರ ಸಭೆ

ಹರಪನಹಳ್ಳಿ ತಾಲ್ಲೂಕಿನ ಬಿಜೆಪಿಯ ಮೂಲ ಕಾರ್ಯಕರ್ತರ ಸಭೆಯನ್ನು ಪ್ರವಾಸಿ ಮಂದಿರದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಕರೆಯಲಾಗಿದೆ. ಸಭೆಯಲ್ಲಿ ತಾಲ್ಲೂಕು ಸಮಿತಿ ರಚಿಸಲಾಗುವುದು ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಲಿಂಗರಾಜು ತಿಳಿಸಿದ್ದಾರೆ.

# ಸುಖದೇವ್ ಗೋಗಾಮೆಡಿ ಹತ್ಯೆಗೆ ಖಂಡನೆ



ದಾವಣಗೆರೆ, ಡಿ. 8- ರಜಪೂತ್ ಕರ್ಣಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಸುಖ್‌ದೇವ್ ಸಿಂಗ್ ಗೋಗಾಮೆಡಿ ಹತ್ಯೆ ಖಂಡಿಸಿ ಜಿಲ್ಲಾ ರಜಪೂತ್ ಮಹಾಸಭಾ ಹಾಗೂ ವಿಷ್ಣು ಸಮಾಜದಿಂದ ನಗರದಲ್ಲಿ ಇಂದು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನಾ ಬೈಕ್ ಯಾನವು ಗಾಂಧಿ ವೃತ್ತದಿಂದ ಹೊರಟು ಪಿ.ಬಿ. ರಸ್ತೆ ಮೂಲಕ ಜಿಲ್ಲಾಡಳಿತ ಭವನದ ವರೆಗೂ ಸಾಗಿ ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಇದೇ ವೇಳೆ ಮಹಾಸಭಾ ಜಿಲ್ಲಾಧ್ಯಕ್ಷ ಜೆ. ಈಶ್ವರಸಿಂಗ್ ಕವಿತಾಳ್ ಮಾತನಾಡಿ, ಸುಖ್‌ದೇವ್ ಸಿಂಗ್ ಗೋಗಾಮೆಡಿ ಅವರನ್ನು ರಾಜಸ್ಥಾನದ ಜೈಪುರದ ಅವರ ನಿವಾಸಕ್ಕೆ ದುಷ್ಕರ್ಮಿಗಳು ನುಗ್ಗಿ ದೇಶೀ ಬಂದೂಕುಗಳಿಂದ ಹತ್ಯೆ ಮಾಡಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಹತ್ಯೆ ಖಂಡಿಸಿ ಕೇವಲ ರಾಜಸ್ಥಾನ ಮಾತ್ರವಲ್ಲದೇ, ದೇಶ ಹಾಗೂ ವಿದೇಶಗಳಲ್ಲಿಯೂ ಮಾನವೀಯ ಮೌಲ್ಯಗಳ ಪ್ರತಿಪಾದಕರು ಜಾತಿ, ಪ್ರಾಂತ್ಯಗಳ ಎಲ್ಲೆ ಮೀರಿ ಪ್ರತಿಭಟನೆ ನಡೆಸುತ್ತಿದ್ದಾರೆ. ಮಾನವೀಯ ಅಂತಃಕರಣ, ಸಮರಸ ಬಾಳ್ವೆಯನ್ನು ಪ್ರತಿಪಾದಿಸುತ್ತಾ ಜೀವನ ನಡೆಸುತ್ತಿದ್ದ ಸುಖದೇವ್ ಸಿಂಗ್ ಹತ್ಯೆಯಿಂದ ನಾಗರಿಕ ಸಮಾಜ ತಲೆ ತಗ್ಗಿಸುವ ಕೆಲಸವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಕೃತ್ಯದ ಹಿಂದೆ ಕಾಣದ ಕೈಗಳು ಕೆಲಸ ಮಾಡಿದ್ದು, ಸಮಾಜದ ಮುಖಂಡರಿಗೆ ಜೀವ ಭಯವಿದೆ. ಇಂತಹ ಕೃತ್ಯಗಳು ಮರುಕಳಿಸದಂತೆ ಕ್ರಮಕೈಗೊಳ್ಳಬೇಕು. ಪ್ರಕರಣದಲ್ಲಿ ಭಾಗಿಯಾದ ತಪ್ಪಿತಸ್ಥರನ್ನು ಕೂಡಲೇ ಬಂಧಿಸಿ, ಸಮಗ್ರ ತನಿಖೆ ನಡೆಸಿ, ಕಠಿಣ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮಾಜದ ಮುಖಂಡರಾದ ಮೂಲಸಿಂಗ್ ರಾಥೋಡ್, ಅಮರ್ ಸಿಂಗ್ ಭಾಟಿ, ಸೈತನ್ ಸಿಂಗ್, ಗೋಪಾಲ್ ಸಿಂಗ್ ಭಾಟಿ, ಶ್ರೀಕಾಂತ್ ಬಗರೆ, ಗೌತಮ್ ಜೈನ್, ಗಣಪತ್ ಸಿಂಗ್ ದೇವ್ಡಾ, ರಾಕೇಶ್, ರಾಹುಲ್, ರಾಜು ಜಿ. ಪಾಟೀಲ್ ಮತ್ತಿತರರು ಭಾಗವಹಿಸಿದ್ದರು.

## ಹೈಕೋರ್ಟ್ ಬೋಧನೆ ಮಾಡಬಾರದು : ಸುಪ್ರೀಂ

ನವದೆಹಲಿ, ಡಿ. 8 – ಹದಿಹರೆಯದ ಬಾಲಕಿಯರು ಕ್ಷಣಿಕ ಸುಖಕ್ಕಾಗಿ ಜೀವನದಲ್ಲಿ ಸಂಕಷ್ಟ ತಂದುಕೊಳ್ಳಬಾರದು ಹಾಗೂ ಬಾಲಕರು ಮಹಿಳೆಯರನ್ನು ಗೌರವಿಸುವುದನ್ನು ಕಲಿಯಬೇಕು ಎಂದು ಕಲ್ಕತ್ತಾ ಹೈಕೋರ್ಟ್ ಪ್ರಕರಣವೊಂದರ ತೀರ್ಪಿನಲ್ಲಿ ಹೇಳಿರುವುದಕ್ಕೆ ಸುಪ್ರೀಂ ಕೋರ್ಟ್ ತೀವ್ರವಾಗಿ ಆಕ್ಷೇಪಿಸಿದೆ.

ಹೈಕೋರ್ಟ್ ಟಿಪ್ಪಣಿ ಆಕ್ಷೇಪಾರ್ಹ ಹಾಗೂ ಅನಗತ್ಯ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಹಾಗೂ ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ನ್ಯಾಯಾಲಯಗಳು ವೈಯಕ್ತಿಕ ನಿಲುವು ಇಲ್ಲವೇ ಬೋಧನೆ ಮಾಡಬಾರದು ಎಂದು ಸುಪ್ರೀಂ ಪೀಠ ಹೇಳಿದೆ.

ಪೋಕ್ಸೋ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಅಕ್ಟೋಬರ್ 18 ರಂದು ತೀರ್ಪೊಂದನ್ನು ನೀಡಿದ್ದ ಕಲ್ಕತ್ತಾ ಹೈಕೋರ್ಟ್‌ನ ನ್ಯಾಯಮೂರ್ತಿಗಳಾದ ಚಿತ್ತ ರಂಜನ್ ದಾಸ್ ಹಾಗೂ ಪಾರ್ಥ ಸಾರತಿ ಸೇನ್ ಅವರನ್ನು ಒಳಗೊಂಡ ಪೀಠ, ಕ್ಷಣಿಕ ಸುಖಕ್ಕಾಗಿ ಬಲಿಯಾಗದೇ ಲೈಂಗಿಕ ಒತ್ತಡಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು ಎಂದು ಹೇಳಿತ್ತು.

ಈ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳ ಆದೇಶದಂತೆ ಸುಪ್ರೀಂ ಕೋರ್ಟ್ ಪೀಠವು ತೀರ್ಪಿನ ಬಗ್ಗೆ ವಿಚಾರಣೆ ನಡೆಸಿತ್ತು.

ಪ್ರಕರಣಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ತನ್ನ ತೀರ್ಪು ಮಾತ್ರ ನೀಡಬೇಕು. ವೈಯಕ್ತಿಕ ನಿಲುವು ಇಲ್ಲವೇ ಬೋಧನೆಗೆ ತೊಡಗಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಹೈಕೋರ್ಟ್ ನೀಡಿರುವ ತೀರ್ಪಿನ 30.3 ಪ್ಯಾರಾ ಅತ್ಯಂತ ಆಕ್ಷೇಪಾರ್ಹ ಹಾಗೂ ಅನಗತ್ಯವಾಗಿದೆ. ಇದು ಸಂವಿಧಾನದ 21ನೇ ವಿಧಿಯ ಅನ್ವಯ ಹದಿಹರೆಯದವರಿಗೆ ನೀಡಲಾದ ಹಕ್ಕುಗಳ ಉಲ್ಲಂಘನೆ ಎಂಬುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

## ಇಬ್ಬರು ಮಹಿಳೆಯರ ಕಾಣೆ : ಪತ್ತೆಗೆ ಮನವಿ



ದಾವಣಗೆರೆ, ಡಿ. 8- ನಗರದಲ್ಲಿರುವ ರಾಜ್ಯ ಮಹಿಳಾ ನಿಲಯ ಜಿಲ್ಲಾ ಸಂಸ್ಥೆಯ 27 ವರ್ಷ ವಯಸ್ಸಿನ ನಿವಾಸಿಗೆ ವಾಕ್ ಹಾಗೂ ಶ್ರವಣ ದೋಷವಿದ್ದು, ಇವರ ವಿಳಾಸ ಪತ್ತೆಗೆ ಸಹಕರಿಸುವಂತೆ ರಾಜ್ಯ ಮಹಿಳಾ ನಿಲಯದ ಜಿಲ್ಲಾ ಸಂಸ್ಥೆಯ ಅಧೀಕ್ಷಕರು ಮನವಿ ಮಾಡಿದ್ದಾರೆ.

ಮುಖದ ಮೇಲೆ ಕಪ್ಪು ಮಚ್ಚೆ ಇದೆ. ಎಡಗೈ ಹೆಬ್ಬೆರಳು ತುಂಡಾಗಿದ್ದು, ದೈಹಿಕ ಮತ್ತು ಮಾನಸಿಕ ಸ್ಥಿತಿ ಸಾಮಾನ್ಯವಾಗಿದೆ. ಮಾತನಾಡಲು ಬರುವುದಿಲ್ಲ.

**ಮಹಿಳೆ ಕಾಣೆ :** ರಾಜ್ಯ ಮಹಿಳಾ ನಿಲಯ ಜಿಲ್ಲಾ ಸಂಸ್ಥೆಯ 55 ವರ್ಷ ವಯಸ್ಸಿನ ನಿವಾಸಿ ಹಿಂದೂ ಮರಾಠ ಜನಾಂಗದ ಸುಶೀಲ ನಾರಾಯಣ ಕಾಂಬ್ಳೆ ಅವರು ಮಾನಸಿಕ ಅಸ್ವಸ್ಥತೆಯಿಂದ ಮನೆ ಬಿಟ್ಟು ಬಂದಿದ್ದಾರೆ. ಎಡಕೆನ್ನೆ ಮೇಲೆ ಕಪ್ಪು ಮಚ್ಚೆ ಇದೆ. ಮರಾಠಿ ಮಾತನಾಡುತ್ತಾರೆ. ಇವರ ಸುಳಿವು ದೊರೆತಲ್ಲಿ ಜಿಲ್ಲಾ ಅಧೀಕ್ಷಕರ ಕಚೇರಿ, ರಾಜ್ಯ ಮಹಿಳಾ ನಿಲಯ, ಇಂಡಸ್ಟ್ರೀಯಲ್ ಏರಿಯಾ, ಶ್ರೀರಾಮನಗರ, ದೂ.ಸಂ. 9448940337 ಸಂಪರ್ಕಿಸಬಹುದು.

## ಹರಿಹರದಲ್ಲಿ ನಾಳೆ ಆರೋಗ್ಯ ತಪಾಸಣಾ ಶಿಬಿರ

ಹರಿಹರ, ಡಿ. 8 - ತಾಲ್ಲೂಕಿನ ಅಕ್ಷಯ ಆಸ್ಪತ್ರೆ ಆವರಣದಲ್ಲಿ ನಾಡಿದ್ದು ದಿನಾಂಕ 10 ರ ಭಾನುವಾರ ಬೆಳಿಗ್ಗೆ 10ಕ್ಕೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ. ಕೃಷ್ಣಪ್ಪ ಸ್ಥಾಪಿತ), ಅಕ್ಷಯ ಆಸ್ಪತ್ರೆ, ಐ-ದೃಷ್ಟಿ ಕಣ್ಣಿನ ಆಸ್ಪತ್ರೆ, ಬೇಬಿ ಸೈನ್ಸ್, ಎಸ್.ಎಸ್.ನಾರಾಯಣ ಹಾರ್ಟ್ ಆಸ್ಪತ್ರೆ ಸಹಯೋಗದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ 67ನೇ ಮಹಾಪರಿ ನಿಬ್ಬಾಣ ದಿನದ ನಿಮಿತ್ತ ಡಾ.ಬಿ.ಆರ್. ಅಂಬೇಡ್ಕರ್ ರವರ ಸದ್ಭಾವನಾ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ವಿಚಾರ ಸಂಕಿರಣ, ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದೆ.

ಇದೇ ಸಂದರ್ಭದಲ್ಲಿ ಅಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ನಡೆಯುವ ಆರೋಗ್ಯ ಶಿಬಿರದಲ್ಲಿ ಇಸಿಜಿ, ಶುಗರ್, ಹಿಮೋಗ್ಲೋಬಿನ್, ಎಚ್‌ಬಿಎ1ಸಿ, 2-ಡಿ, ಇಕೋ, ಕಣ್ಣಿನ ಪರೀಕ್ಷೆಗಳನ್ನು ಉಚಿತವಾಗಿ ತಜ್ಞ ವೈದ್ಯರಿಂದ ನಡೆಸಲಾಗುವುದು.

## ಹರಿಹರದಲ್ಲಿ ಇಂದು ಕೇಂದ್ರ ಸರ್ಕಾರದ ಯೋಜನೆಗಳ ನೋಂದಣಿ ಕಾರ್ಯಕ್ರಮ

ಆಟೋ ಮಾಲೀಕರ ಮತ್ತು ಚಾಲಕರ ಸಂಘದ ವತಿಯಿಂದ ಇಂದು ಬೆಳಿಗ್ಗೆ ಗುರುಭವನದಲ್ಲಿ ಅಸಂಘಟಿತ ಕಾರ್ಮಿಕರಾದ ಆಟೋ ಚಾಲಕರಿಗೆ ಕೇಂದ್ರ ಸರ್ಕಾರದ ಯೋಜನೆಗಳ ನೋಂದಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕೇಂದ್ರ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ಸಾಮಾಜಿಕ ಭದ್ರತೆ ಯೋಜನೆಗಳಾದ ಈ-ಶ್ರಮ್ ಕಾರ್ಡ್, ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆ ನೋಂದಣಿ ಮತ್ತು ಪ್ರಧನಾ ಮಂತ್ರಿ ಸ್ವನಿಧಿ ಸಮೃದ್ಧಿ ಯೋಜನೆಗಳ ಅರಿವು ಮತ್ತು ನೋಂದಣಿ ಕಾರ್ಯಕ್ರಮ ನಡೆಯಲಿದೆ. ಸಂಸದ ಜಿ.ಎಂ. ಸಿದ್ಧೇಶ್ವರ, ಶಾಸಕ ಬಿ.ಪಿ. ಹರೀಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

## ಬಿಐಇಟಿಯಲ್ಲಿ ಇಂದು ಅಂತರರಾಷ್ಟ್ರೀಯ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನದ 'ಸವಿನೆನಪು'

ದಾವಣಗೆರೆ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ 'ಸವಿನೆನಪು' ಅಂತರರಾಷ್ಟ್ರೀಯ ಹಿರಿಯ ವಿದ್ಯಾರ್ಥಿಗಳ ಸಮ್ಮಿಲನ ಕಾರ್ಯಕ್ರಮವನ್ನು ಎಸ್.ಎಸ್. ಮಲ್ಲಿಕಾರ್ಜುನ್ ಸಾಂಸ್ಕೃತಿಕ ಕೇಂದ್ರದಲ್ಲಿ ಇಂದು ಮಧ್ಯಾಹ್ನ 2.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಸುಮಾರು 1000 ಹಿರಿಯ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕ ಆರ್. ಗಿರೀಶ್, ಹೈದರಾಬಾದ್ ಅರಬಿಂದೊ ಫಾರ್ಮ್ ನಿರ್ದೇಶಕ ಸತಕರ್ಣಿ ಮಕ್ಕಾಪತಿ, ಯುಎಸ್‌ಎ ಎಸ್. ಎ. ಪಿ. ಲಿವೋಸ್ ಎಂಟರ್ ಪ್ರೈಸ್ ನಿರ್ದೇಶಕ ಆನಂದ ಕುಮಾರ ಎನ್. ಎಸ್. ಲೋಕೋಪಯೋಗಿ ಇಲಾಖೆ, ಕೇಂದ್ರ ವಲಯ, ಶಿವಮೊಗ್ಗದ ಮುಖ್ಯ ಇಂಜಿನಿಯರ್ ಬಿ. ವಿ. ಜಗದೀಶ್ ಭಾಗವಹಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ಬಿ.ಐ.ಇ.ಟಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ವಹಿಸುವರು. ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ ಕಾಲೇಜಿನ ಪಕ್ಷಿನೋಟದ ವಿವರಣೆ ನೀಡುವರು.

ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಡಾ. ದೇವೇಂದ್ರಪ್ಪ ಕೆ. ಸಿ. ಮತ್ತು ಇತರರು ಭಾಗವಹಿಸುವರು.

## ರಫ್ತು ನಿಷೇಧದ ವಿರುದ್ಧ ಪ್ರತಿಭಟನೆ

(1ನೇ ಪುಟದಿಂದ) ಪ್ರತಿಭಟನಾ ನಿರತ ರೈತ ಕಿರಣ್ ದರಾದೆ, ಸರ್ಕಾರ ಯಾವುದೇ ಸೂಚನೆ ನೀಡದೇ ಅಥವಾ ಯಾರಿಂದಲೂ ದೂರು ಬರದೇ ಇದ್ದರೂ ರಫ್ತಿನ ಮೇಲೆ ನಿಷೇಧ ಹೇರಿದೆ.

ಅಕಾಲಿಕ ಮಳೆಯಿಂದಾಗಿ ರೈತರು ಈಗಾಗಲೇ ನಷ್ಟಕ್ಕೆ ಗುರಿಯಾಗಿದ್ದಾರೆ. ನಿಷೇಧವನ್ನು ವಾಪಸ್ ಪಡೆಯಬೇಕು ಎಂದವರು ಆಗ್ರಹಿಸಿದ್ದಾರೆ. ಕಳೆದ ಅಕ್ಟೋಬರ್‌ನಿಂದ ಕೇಂದ್ರ ಸರ್ಕಾರ ತನ್ನ ಕಾಪು ದಾಸ್ತಾನಿನ ಮೂಲಕ ಈರುಳ್ಳಿಯನ್ನು ಕೆ.ಜಿ.ಗೆ 25 ರೂ.ಗಳಂತೆ ಮಾರಾಟ ಮಾಡುತ್ತಿದೆ.

## ನಗರದಲ್ಲಿ ನಾಳಿನ ನಿವೇಶನ, ವಸತಿ ರಹಿತರ ಕಾರ್ಯಾಗಾರಕ್ಕೆ ಸಾತಿ ಸುಂದರೇಶ್ ಚಾಲನೆ

ದಾವಣಗೆರೆ, ಡಿ. 8- ನಿವೇಶನ ಮತ್ತು ವಸತಿ ರಹಿತರ ಕಾರ್ಯಾಗಾರಕ್ಕೆ ಸಿಪಿಐ ರಾಜ್ಯ ಕಾರ್ಯದರ್ಶಿ ಕಾಂ. ಸಾತಿ ಸುಂದರೇಶ್ ನಾಡಿದ್ದು ದಿನಾಂಕ 10ರ ಭಾನುವಾರ ಚಾಲನೆ ನೀಡಲಿದ್ದಾರೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಕಾಂ. ಆವರಗೆರೆ ಚಂದ್ರು ತಿಳಿಸಿದ್ದಾರೆ. 10ರಂದು ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ನೇತೃತ್ವದಲ್ಲಿ ನಡೆಯುವ ಜಿಲ್ಲಾ ನಿವೇಶನ ಮತ್ತು ವಸತಿ ರಹಿತರ ಮಾಹಿತಿ ಕಾರ್ಯಾಗಾರವನ್ನು ಉದ್ಘಾಟಿಸಿ ಸರ್ಕಾರದ ವಿವಿಧ ಯೋಜನೆಗಳ ಮೂಲಕ ನಿವೇಶನ ರಹಿತ ಮತ್ತು ವಸತಿ ರಹಿತ ಫಲಾನುಭವಿಗಳು ಸೌಲತ್ತುಗಳನ್ನು ಪಡೆದುಕೊಳ್ಳುವ ಕುರಿತು ಸಮಗ್ರ ಮಾಹಿತಿ ನೀಡಲಿದ್ದಾರೆ. ಬೆಳಿಗ್ಗೆ 11-30ಕ್ಕೆ ಕಾಂ. ಪಂಪಾಪತಿ ಭವನದಲ್ಲಿ ಆರಂಭವಾಗುವ ಈ ಕಾರ್ಯಾಗಾರದ ಅಧ್ಯಕ್ಷತೆಯನ್ನು ಸಿಪಿಐ ಹಿರಿಯ ಮುಖಂಡ ಹಾಗೂ ಜಿಲ್ಲಾ ಖಜಾಂಚಿ ಕಾಂ. ಆನಂದರಾಜ್ ವಹಿಸುವರು.

## ಎಸ್ಸೆಸ್, ಎಸ್ಸೆಸ್ಸೆಂ ಸಂತಾಪ

ದಾವಣಗೆರೆ, ಡಿ. 8 - ಹಿರಿಯ ನಟಿ ಲೀಲಾವತಿ ಅವರ ನಿಧನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ಕೆ. ದಿನೇಶ್ ಶೆಟ್ಟಿ ಸಂತಾಪ ಪಡಿಸಿದ್ದಾರೆ.

## ಪಂಚದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಶ್ರೀ ಶನೇಶ್ವರ ಸ್ವಾಮಿ ಕಾರ್ತಿಕೋತ್ಸವ

ದಾವಣಗೆರೆ ಪಿ.ಬಿ. ರಸ್ತೆ, ಕರೂರು ಕ್ರಾಸ್ ಬಳಿ ಇರುವ ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಶ್ರೀ ಶನೇಶ್ವರ ಸ್ವಾಮಿ ಕಾರ್ತಿಕೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 6.30 ಗಂಟೆಗೆ ಶ್ರೀ ಶನೇಶ್ವರಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ವಿಶೇಷ ಅಲಂಕಾರ, ಸಂಜೆ 6.30 ಗಂಟೆಗೆ ಶ್ರೀ ಶನೇಶ್ವರಸ್ವಾಮಿ ಕಾರ್ತಿಕೋತ್ಸವ ಇರುತ್ತದೆ.

# ವಕೀಲ ಈರನಗೌಡ ಹತ್ಯೆಗೆ ಖಂಡನೆ



**ಜಗಳೂರಿನಲ್ಲಿ ವಕೀಲರ ಪ್ರತಿಭಟನೆ**

ಜಗಳೂರು, ಡಿ. 8 - ಕಲಬುರಗಿ ಜಿಲ್ಲೆಯ ವಕೀಲ ಈರನಗೌಡ ಪಾಟೀಲ್ ಅವರ ಬರ್ಬರ ಹತ್ಯೆ ಖಂಡಿಸಿ, ತಾಲ್ಲೂಕು ನ್ಯಾಯವಾದಿಗಳ ಸಂಘದಿಂದ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ನ್ಯಾಯವಾದಿಗಳ ಸಂಘದ ಅಧ್ಯಕ್ಷ ಇ. ಓಂಕಾರೇಶ್ವರ ಮಾತನಾಡಿ, ಕಲಬುರಗಿ ಜಿಲ್ಲೆಯ ನ್ಯಾಯವಾದಿಗಳ ಸಂಘದ ಸದಸ್ಯ ಈರನಗೌಡ ಪಾಟೀಲ್ ಅವರನ್ನು ಮೊನ್ನೆ ದುಷ್ಕರ್ಮಿಗಳು ಹಾಡುಹಗಲೇ ಹಲ್ಲೆ ಮಾಡಿ, ಹತ್ಯೆ ನಡೆಸಿರುವುದು ವಕೀಲರಿಗೆ ಕಾನೂನು ಭದ್ರತೆಯಿಲ್ಲದೆ ನಾಗರಿಕ ಸಮಾಜದಲ್ಲಿ ತಲೆತಗ್ಗಿಸುವಂತಾಗಿದೆ. ಹತ್ಯೆಗೈದ ದುಷ್ಕರ್ಮಿಗಳ ವಿರುದ್ಧ ಕೂಡಲೇ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ನ್ಯಾಯವಾದಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ವಿ. ರುದ್ರೇಶಿ, ಖಜಾಂಚಿ ಸಿ. ಬಸವರಾಜ್, ಪದಾಧಿಕಾರಿಗಳಾದ ಡಿ.ವಿ. ನಾಗಪ್ಪ, ಆರ್. ಓಬಳೇಶ್, ಸುನಿಲ್ ಕುಮಾರ್, ಹೆಚ್. ಬಸವರಾಜ್, ಅಶೋಕ್ ಕುಮಾರ್, ತಿಪ್ಪೇಸ್ವಾಮಿ, ಭೂಪತಿ, ಶ್ರೀನಿವಾಸ್ ಮುಂತಾದ ವರು ಇದ್ದರು.

## ನಗರದಲ್ಲಿ ಇಂದು ಶ್ರೀ ಪಾಂಡುರಂಗ ವಿಠಲ ರುಖುಮಾಯಿ ದಿಂಡಿ ಮಹೋತ್ಸವ



ಶ್ರೀ ನಾಮದೇವ ಸಿಂಪಿ ಸಮಾಜ ಹಾಗೂ ವಿವಿಧ ಅಂಗ ಸಂಸ್ಥೆಗಳ ಸಹಯೋಗದಲ್ಲಿ ಎಸ್‌ಕೆಪಿ ರಸ್ತೆಯಲ್ಲಿನ ಶ್ರೀ ವಿಠಲ್ ಮಂದಿರ ಹಾಗೂ ದೊಡ್ಡಪೇಟೆ ಶ್ರೀ ನಾಮದೇವ ಭಜನಾ ಮಂದಿರದಲ್ಲಿ 98 ನೇ ಶ್ರೀ ಪಾಂಡುರಂಗ ವಿಠಲ ರುಖುಮಾಯಿ ದಿಂಡಿ ಮಹೋತ್ಸವ ಕಾರ್ಯಕ್ರಮವನ್ನು ಇಂದು ಮತ್ತು ನಾಳೆ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜದ ಅಧ್ಯಕ್ಷ ಎಂ.ಎಸ್ ವಿಠಲ್ ತಿಳಿಸಿದರು.

ಇಂದು ಬೆಳಿಗ್ಗೆ 5 ಕ್ಕೆ ಕಾಕಡರಾತಿ, ಅಭಿಷೇಕ ಹಾಗೂ ಮಂಗಳಾರತಿ ನಡೆಯಲಿದೆ. ಬೆಳಿಗ್ಗೆ 9 ಕ್ಕೆ ಶ್ರೀ ಜ್ಞಾನೇಶ್ವರಿ ಸಾಮುದಾಯಿಕ ಪಾರಾಯಣ, ನಂತರ ಭಜನೆ, ಪ್ರವಚನ ನೆರವೇರಲಿದೆ. ಸಂಜೆ 5.15 ಕ್ಕೆ ಮಯೂರ ರಥದಲ್ಲಿ ಶ್ರೀ ವಿಠಲ ರುಖುಮಾಯಿ ಉತ್ಸವ ಪ್ರಮುಖ ಬೀದಿಗಳಲ್ಲಿ ಜರುಗಲಿದೆ.

## ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ನಾಳೆ ಲಿಖಿತ ಪರೀಕ್ಷೆ

ದಾವಣಗೆರೆ, ಡಿ.8- ಕಲ್ಯಾಣ ಕರ್ನಾಟಕ ಪ್ರದೇಶದ ಪೊಲೀಸ್ ಕಾನ್ಸ್‌ಟೇಬಲ್ (ಸಿವಿಲ್) (ಪುರುಷ ಮತ್ತು ಮಹಿಳಾ), (ತೃತೀಯ ಲಿಂಗ ಪುರುಷ ಮತ್ತು ಮಹಿಳಾ) ಹಾಗೂ ಸೇವಾನಿರತ ಮತ್ತು ಬ್ಯಾಕ್‌ಲಾಗ್-454 ಹುದ್ದೆಗಳಿಗೆ ನಾಡಿದ್ದು ದಿನಾಂಕ 10 ರ ಭಾನುವಾರ ಬೆಳಿಗ್ಗೆ 11 ರಿಂದ 12.30 ಗಂಟೆಯವರೆಗೆ ಲಿಖಿತ ಪರೀಕ್ಷೆಯನ್ನು ನಗರದ 7 ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಾಗುತ್ತದೆ.

ಎ.ವಿ. ಕಮಲಮ್ಮ ಮಹಿಳಾ ಕಾಲೇಜು, ಜಿ.ಎಂ ಹಾಲಮ್ಮ ಪಿ.ಯು ಕಾಲೇಜು, ಜಿ.ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು ಹೈಸ್ಕೂಲ್ ಮೈದಾನ, ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಜನಹಳ್ಳಿ ಸೀತಮ್ಮ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಶ್ರೀ ತರಳಬಾಳು ಜಗದ್ಗುರು ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಪರೀಕ್ಷೆ ನಡೆಯಲಿದೆ.

ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್ ತಿಳಿಸಿದ್ದಾರೆ.


**LADIES PG BUILDING FOR RENT**

ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.

Mobi. : 95351 14063, 96203 71544, 97428 35642


## ಸಾರ್ವಜನಿಕ ಪ್ರಕಟಣೆ

ಜಕೀಉಲ್ಲಾಖಾನ್ ಪಠಾಣ್ ಬಿನ್ ಲೇಟ್ ಮಹಬೂಬ್‌ಖಾನ್ ಪಠಾಣ್, ವಾಸ:- ಡೋರ್ ನಂ.52, 9-ಎ ಮೇನ್, 3ನೇ ಮೇನ್, 3ನೇ ಕ್ರಾಸ್, 1ನೇ ಹಂತ ಬಿ.ಟಿ.ಎಂ. ಲೇಔಟ್, ಬೆಂಗಳೂರು-29 ರ ವಾಸಿಯಾದ ನಾನು ಈ ಮೂಲಕ ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ :

ನಮ್ಮ ತಂದೆಯಾದ ದಿವಂಗತ ಮೆಹಬೂಬ್‌ಖಾನ್ ಪಠಾಣ್ ಎಂಬುವವರ ಹೆಸರಿನಲ್ಲಿ ರಾಣೇಬೆನ್ನೂರು ಟೌನ್‌ನಲ್ಲಿ ಇದ್ದಂತಹ ಮಾಳಿಗೆ ಮನೆಯನ್ನು ಮಾರಾಟ ಮಾಡಿ ಅದರಿಂದ ಬಂದಂತಹ ಹಣದಲ್ಲಿ ದಾವಣಗೆರೆ ಜಿಲ್ಲಾ, ದಾವಣಗೆರೆ ತಾಲ್ಲೂಕ್, ಕಸಬಾ ಹೋಬಳಿ,ಯರಗುಂಟೆ ಗ್ರಾಮದಲ್ಲಿರುವ ಖಾಲಿ ಜಾಗ ಮತ್ತು ಖಾನೇಷುಮಾರಿ ನಂಬರ್.191 ಮತ್ತು ಸೈಟ್ ನಂಬರುಗಳು 57, 59, 61, ಪ್ರತಿ ಸೈಟಿನ ಅಳತೆ 30x60, ಸದರಿ ಮೂರೂ ಸೈಟುಗಳೂ ಸಹ ಅಕ್ಕಪಕ್ಕದಲ್ಲಿರುವಂತಹ ಸೈಟುಗಳನ್ನು ಖರೀದಿ ಮಾಡಿ ನನ್ನ ತಾಯಿಯವರಾದ ಸಕೀನಾಬೇಗಂ ಕೋಂ ಮಹಬೂಬ್‌ಖಾನ್ ಪಠಾಣ್ ಇವರ ಹೆಸರಿಗೆ 1984 ರಲ್ಲಿ ಕ್ರಯ ನೋಂದಣಿ ಮೂಲಕ ಪಡೆದಂತಹ ಆಸ್ತಿಗಳಾಗಿರುತ್ತವೆ. ಸದರಿ ನಮ್ಮ ತಂದೆ ಮಹಬೂಬ್‌ಖಾನ್ ಪಠಾಣ್ ಹಾಗೂ ನಮ್ಮ ತಾಯಿ ಸಕೀನಾ ಬೇಗಂ ಇವರಿಗೆ ನಾವು ಐದು ಜನ ಮಕ್ಕಳಿದ್ದು, ಮೂರು ಜನ ಗಂಡು ಮಕ್ಕಳು, ಅದರಲ್ಲಿ ಒಂದನೇ ತಕೀವುಲ್ಲಾಖಾನ್, 2ನೇ ಶಫೀವುಲ್ಲಾಖಾನ್ ಮತ್ತು ಹೆಣ್ಣು ಮಕ್ಕಳಲ್ಲಿ ಅಜಾರಾಶಾಹೀನ್ ಮತ್ತು ಯಾಸ್ಮಿನ್‌ದಾವೂದ್ ಹಾಗೂ ನಾನು ಇರುತ್ತೇವೆ. ಇನ್ನು ಈ ಮೇಲೆ ಕಾಣಿಸಿದ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ನಮ್ಮ ಕುಟುಂಬದ ಅಂದರೆ ನನ್ನ ತಂದೆ-ತಾಯಿಯ ವಾರಸುದಾರರೆಲ್ಲರಿಗೂ ಸಹ ಸಮಾನ ಹಕ್ಕು ಇರುತ್ತದೆ. ಆದಾಗ್ಯೂ ಸಹ ನನ್ನ ಅಣ್ಣನಾದ ಶಫೀವುಲ್ಲಾಖಾನ್ ಎಂಬುವವರು ನನಗೆ ಹಾಗೂ ನನ್ನ ಒಟ್ಟು ಕುಟುಂಬದ ಸದಸ್ಯರ ಒಪ್ಪಿಗೆಯನ್ನು ಪಡೆಯದೇ, ನನ್ನ ತಾಯಿಯ ಆರೋಗ್ಯ ಸರಿಯಿಲ್ಲದ ಸಮಯದಲ್ಲಿ ಹಾಗೂ ವಯಸ್ಸಾದ ನನ್ನ ತಾಯಿಯಿಂದ ಮೋಸದಿಂದ ಆತನ ಹೆಸರಿಗೆ ದಾನ ಪತ್ರವನ್ನು ಮಾಡಿಸಿಕೊಂಡಿರುತ್ತಾನೆ. ಸದರಿ ನನ್ನ ಅಣ್ಣ ನನ್ನ ತಾಯಿಯಿಂದ ದಿನಾಂಕ 07.08.2002ರಂದು ಮಾಡಿಸಿಕೊಂಡಿರುವ ದಾನ ಪತ್ರವು ಕಾನೂನುಬಾಹಿರವಾಗಿರುತ್ತದೆ. ಆದ್ದರಿಂದ ನಾನು ನನ್ನ ಅಣ್ಣಂದಿರ ಮತ್ತು ಅಕ್ಕ-ತಂಗಿಯರ ವಿರುದ್ಧ ಮಾನ್ಯ ದಾವಣಗೆರೆಯ 3ನೇ ಹೆಚ್ಚುವರಿ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಅಸಲು ದಾವೆ ನಂ.388/2023 ರಲ್ಲಿ ಹಿಸ್ಸೆಯ ದಾವೆಯನ್ನು ಸಲ್ಲಿಸಿದ್ದೇನೆ. ಸದರಿ ದಾವೆಯು ಚಾಲ್ತಿಯಲ್ಲಿರುತ್ತದೆ. ಇನ್ನು ಈ ಮೇಲ್ಕಂಡ ಆಸ್ತಿಗಳ ಬಗ್ಗೆ ನನ್ನ ಅಣ್ಣನಾದ ಶಫೀವುಲ್ಲಾಖಾನ್ ಬಿನ್ ಲೇಟ್ ಮಹಬೂಬ್‌ಖಾನ್ ಎಂಬುವವರು ಮಾರಾಟ ಮಾಡುವ ಪ್ರಯತ್ನವನ್ನು ನಡೆಸಿದ್ದಾರೆ. ಸದರಿ ನನ್ನ ಅಣ್ಣನಿಗೆ ಮೇಲ್ಕಂಡ ಆಸ್ತಿಗಳನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಇರುವುದಿಲ್ಲ. ಆದ್ದರಿಂದ ಸಾರ್ವಜನಿಕರು ಯಾರಾದರೂ ಮೇಲ್ಕಂಡ ಆಸ್ತಿಗಳನ್ನು ಕ್ರಯಕ್ಕೆ ಪಡೆದಲ್ಲಿ ಮುಂದಾಗುವ ಕಾನೂನು ಕ್ರಮಗಳಿಗೆ ನಾನು ಜವಾಬ್ದಾರನಾಗಿರುವುದಿಲ್ಲ.


**ಷೆಡ್ಯೂಲ್ :** ದಾವಣಗೆರೆ ಜಿಲ್ಲಾ, ದಾವಣಗೆರೆ ತಾಲ್ಲೂಕ್, ಕಸಬಾ ಹೋಬಳಿ, ಯರಗುಂಟೆ ಗ್ರಾಮದಲ್ಲಿರುವ ಖಾಲಿ ಜಾಗಗಳ ಖಾನೇಷುಮಾರಿ ನಂ.191 ಮತ್ತು ಸೈಟ್ ನಂ.57, 59 ಮತ್ತು 61, ಪ್ರತಿ ಸೈಟುಗಳ ಅಳತೆ 30x60 ಮೂರೂ ಸೈಟುಗಳು ಒಂದಕ್ಕೊಂದು ಹೊಂದಿಕೊಂಡು ಅಕ್ಕಪಕ್ಕದಲ್ಲಿರುತ್ತವೆ. ಇವುಗಳಿಗೆ ಚಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಜಡೆ ಸುಬ್ಬರಾವ್ ಇವರ ಖಾಲಿ ಸೈಟು, ಉತ್ತರಕ್ಕೆ: ಸೈಟ್ ನಂ.55, ದಕ್ಷಿಣಕ್ಕೆ : ಸೈಟ್ ನಂ.63.

**ಸಹಿ /- (ಜಕೀಉಲ್ಲಾಖಾನ್) ಪ್ರಕಟಣಾದಾರ/ವಾದಿ**

**ಸ್ಥಳ : ದಾವಣಗೆರೆ,**
**ದಿನಾಂಕ:**

**ಕೆ.ಹೆಚ್. ಮಂಜಪ್ಪ, ವಕೀಲರು, B.A.,M.S.W.LB**
**ಆಶೀರ್ವಾದ್, #32, 5ನೇ ಕ್ರಾಸ್, ಎ ಬ್ಲಾಕ್, ಶ್ರೀ ದೇವರಾಜ್ ಅರಸ್ ಲೇಔಟ್, ಹೊಸಕೋರ್ಟ್ ಹಿಂಭಾಗ, ದಾವಣಗೆರೆ-577 006.**

## ನಗರದಲ್ಲಿ ಇಂದು - ನಾಳೆ ಯರಗುಂಟೆ ಕರಿಬಸವೇಶ್ವರ ಸ್ವಾಮಿ ರಥೋತ್ಸವ



ದಾವಣಗೆರೆ, ಡಿ. 8- ಯರಗುಂಟೆ ಶ್ರೀ ಗುರು ಕರಿಬಸವೇಶ್ವರ ಸ್ವಾಮಿ ಗದ್ದಿಗೆ ಮಠದ ವತಿಯಿಂದ ನಾಳೆ ದಿನಾಂಕ 9 ಹಾಗೂ ನಾಡಿದ್ದು ದಿನಾಂಕ 10 ರಂದು ಶ್ರೀ ಗುರು ಕರಿಬಸವೇಶ್ವರ ಸ್ವಾಮಿಯ ನೂತನ ರಥೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಮಠದ ಶ್ರೀ ಪರಮೇಶ್ವರ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಾಳೆ ದಿನಾಂಕ 9 ರ ಶನಿವಾರ ಬೆಳಿಗ್ಗೆ 5 ಗಂಟೆಗೆ ವಿನಾಯಕ ಪೂಜೆ, ಧ್ವಜಾರೋಹಣ ಕಾರ್ಯಕ್ರಮ ನೆರವೇರಲಿದೆ. ಬೆಳಿಗ್ಗೆ 6 ಕ್ಕೆ ಮಹಾಗಣಪತಿ ಪೂಜೆ, ನವಗ್ರಹ ಪೂಜೆ, ರುದ್ರಹೋಮ, ಗೋ ಪೂಜೆ, ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ, ರಾತ್ರಿ 8.30 ಕ್ಕೆ ಶ್ರೀ ಮಠದಿಂದ ಅರಿಶಿಣ ಎಣ್ಣೆ ಕಾರ್ಯಕ್ರಮ, ಕಳಸಾರೋಹಣದ ನಂತರ ಭಜನೆ ಕಾರ್ಯಕ್ರಮವಿರುತ್ತದೆ.

ನಾಡಿದ್ದು ದಿನಾಂಕ 10 ರಂದು ಬೆಳಿಗ್ಗೆ 6 ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗಳ ಕಾರ್ಯಕ್ರಮ ನೆರವೇರಲಿದೆ. ಕಾಶಿ ವಿಶ್ವನಾಥ್ ವೀರಗಾಸೆ ಕಲಾತಂಡ ಕೆ.ಬೇವಿನಹಳ್ಳಿ ಇವರಿಂದ ವೀರಗಾಸೆ ಪ್ರದರ್ಶನವಿರುತ್ತದೆ.

ಬೆಳಿಗ್ಗೆ 10 ಕ್ಕೆ ಧರ್ಮಸಭೆ ನಡೆಯಲಿದ್ದು, ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯ ರಾಜದೇಶಿಕೇಂದ್ರ ಸ್ವಾಮೀಜಿ, ಕಾಶಿ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಶ್ರೀ ರುದ್ರಮುನಿ ಸ್ವಾಮೀಜಿ ಸಮ್ಮುಖ, ಡಾ. ಅಭಿನವ ಸಿದ್ಧಲಿಂಗ ಸ್ವಾಮೀಜಿ ನುಡಿ ನೈವೇದ್ಯ ಮಾಡಲಿದ್ದಾರೆ. ಶ್ರೀ ರಾಚೋಟೇಶ್ವರ ಶಿವಾಚಾರ್ಯ ಸ್ವಾಮೀಜಿ, ಡಾ. ಬಸವ ಜಯಚಂದ್ರ ಸ್ವಾಮೀಜಿ, ಶ್ರೀ ಕೇದಾರ ಲಿಂಗ ಶಿವಶಾಂತವೀರ ಸ್ವಾಮೀಜಿ ಮತ್ತಿತರರು ಉಪಸ್ಥಿತರಿರುವರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದ ಡಾ.ಜಿ.ಎಂ. ಸಿದ್ದೇಶ್ವರ್, ಶಾಸಕರಾದ ಬಸವರಾಜ್ ಶಿವಗಂಗಾ, ಬಿ.ಪಿ. ಹರೀಶ್, ಕೆ.ಎಸ್. ಬಸವಂತಪ್ಪ, ದೇವೇಂದ್ರಪ್ಪ, ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ನಿರ್ದೇಶಕ ಜಿ.ಬಿ. ವಿನಯ್ ಕುಮಾರ್, ಪಾಲಿಕೆ ಆಯುಕ್ತೆ ರೇಣುಕಾ, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಸದಸ್ಯ ಮಂಜುನಾಥ ಗಡಿಗುಡಾಳ್ ಸೇರಿದಂತೆ, ಇತರೆ ಗಣ್ಯರು ಆಗಮಿಸಲಿದ್ದಾರೆ.ಮಧ್ಯಾಹ್ನ 12.15 ಕ್ಕೆ ಮಹಿಳೆಯರಿಂದ ನೂತನ ಹೂವಿನ ರಥೋತ್ಸವ ಜರುಗಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಎನ್.ಎಸ್. ರಾಜು, ಕೆ.ಆರ್. ವಿಜಯಕುಮಾರ್, ಎನ್.ಮಂಜುನಾಥ್, ರಾಕೇಶ್ ಪಾಟೀಲ್, ಎ.ಸಿ. ಕರಿಬಸಪ್ಪ, ಲೋಹಿತ್, ವಿಠೋಬರಾವ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಶಾಲಾ ಆಟೋ-ವ್ಯಾನ್ ರ‍್ಯಾಲಿ

ದಾವಣಗೆರೆ ಜಿಲ್ಲಾ ಶಾಲಾ ಆಟೋ ಮತ್ತು ವ್ಯಾನ್ ಚಾಲಕರ ಸಂಘದ ವತಿಯಿಂದ 500 ಆಟೋ, 300 ವ್ಯಾನ್‌ಗಳ ರ‍್ಯಾಲಿ ಹೈಸ್ಕೂಲ್ ಮೈದಾನದಿಂದ ಇಂದು ಪ್ರಾರಂಭಗೊಳ್ಳಲಿದೆ. ಬೆಳಗ್ಗೆ 10 ಗಂಟೆಗೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಈ ರ‍್ಯಾಲಿಗೆ ಚಾಲನೆ ನೀಡುವರು. ಸಂಜೆ 6 ಗಂಟೆಗೆ ಹೈಸ್ಕೂಲ್ ಮೈದಾನದಲ್ಲಿ ಕರ್ನಾಟಕ ರಾಜ್ಯೋತ್ಸವ ಮತ್ತು ರಸಮಂಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜೀ ಕನ್ನಡ ಕಾಮಿಡಿ ಕಿಲಾಡಿಗಳಿಂದ ಹಾಸ್ಯ ಕಾರ್ಯಕ್ರಮವಿದೆ ಎಂದು ಜಿಲ್ಲಾಧ್ಯಕ್ಷ ವಿ. ಮಂಜುನಾಥ್ ತಿಳಿಸಿದ್ದಾರೆ. ಸಂಜೆ ಕಾರ್ಯಕ್ರಮಕ್ಕೆ ಸಂಸದ ಜಿ.ಎಂ.ಸಿದ್ದೇಶ್ವರ, ಬಿಜೆಪಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಲೋಕಿಕೆರೆ ನಾಗರಾಜ, ಮಾಜಿ ಮೇಯರ್ ಬಿ.ಜೆ. ಅಜಯ್ ಕುಮಾರ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ಸೇರಿದಂತೆ ಅತಿಥಿ ಗಣ್ಯರು ಭಾಗವಹಿಸುವರು.




## ನಗರದಲ್ಲಿ ರಾಜ್ಯ ಮಟ್ಟದ ಟೆನ್ನಿಸ್ ಪಂದ್ಯಾವಳಿಗೆ ಚಾಲನೆ

ದಾವಣಗೆರೆ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದ ಟೆನ್ನಿಸ್ ಕೋರ್ಟ್‌ನಲ್ಲಿ ಡಿಸ್ಟ್ರಿಕ್ಟ್ ಟೆನ್ನಿಸ್ ಅಸೋಸಿಯೇಷನ್ (ಡಿಟಿಎ) ವತಿಯಿಂದ 3 ದಿನಗಳ ರಾಜ್ಯ ಮಟ್ಟದ ಆಹ್ವಾನಿತ ಟೆನ್ನಿಸ್ ಪಂದ್ಯಾವಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಶುಕ್ರವಾರ ಚಾಲನೆ ನೀಡಿದದರು.

## ಚಿಗಟೇರಿಯಲ್ಲಿ ಇಂದು ಕಡೇ ಕಾರ್ತಿಕ



ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಗ್ರಾಮದಲ್ಲಿ ಇಂದು ಸಂಜೆ ಶ್ರೀ ಶಿವನಾರದಮುನಿ ಸ್ವಾಮಿಯ ಕಡೇ ಕಾರ್ತಿಕೋತ್ಸವ ನಡೆಯಲಿದೆ.

ಕಾರ್ತಿಕೋತ್ಸವದ ಪ್ರಯುಕ್ತ ಬೆಳಿಗ್ಗೆ ಶ್ರೀ ಸ್ವಾಮಿಗೆ ಪೂಜಾ ವಿಧಿ-ವಿಧಾನಗಳು ಜರುಗಲಿದ್ದು, ನಂತರ ವಿಜೃಂಭಣೆಯ ಕಾರ್ತಿಕ ದೀಪೋತ್ಸವ ಏರ್ಪಾಡಾಗಿದೆ. ಸರ್ವ ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀ ಸ್ವಾಮಿಯ ಕೃಪಾಶೀರ್ವಾದ ಪಡೆಯುವಂತೆ ಶ್ರೀ ನಾರದಮುನಿ ಸೇವಾ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಹಿರಿಯ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಕೋರಿದ್ದಾರೆ.

## ಎಲೆಬೇತೂರಿನಲ್ಲಿ ಇಂದು ಕಾರ್ತಿಕ



ದಾವಣಗೆರೆ ತಾಲ್ಲೂಕಿನ ಎಲೆಬೇತೂರು ಗ್ರಾಮದ ಶ್ರೀ ಆಂಜ ನೇಯ ಸ್ವಾಮಿ ಕಾರ್ತಿಕೋತ್ಸವವು ಇಂದು ನಡೆಯಲಿದೆ. ಬೆಳಿಗ್ಗೆ ಶ್ರೀ ಆಂಜನೇಯ ಸ್ವಾಮಿ ಹಾಗೂ ಈಶ್ವರ-ಬಸವಣ್ಣ ದೇವರಿಗೆ ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಬಿಲ್ವಾರ್ಚನೆ ಹಾಗೂ ಮಂಗಳಾರತಿ ನಡೆಯಲಿದೆ. ಸಂಜೆ 6.30ಕ್ಕೆ ಕಾರ್ತಿಕ ಹಚ್ಚುವುದು, ಮಹಾಮಂಗಳಾರತಿ ಹಾಗೂ ಫಳ್ಹಾರ ವಿನಿಯೋಗ ನಡೆಯಲಿದೆ.

## ನಗರದಲ್ಲಿ ನಾಳೆ ಆರೋಗ್ಯ ತಪಾಸಣೆ

ದಾವಣಗೆರೆ, ಡಿ. 8 - ನಗರದ ಶ್ರೀ ಭಗವಾನ್ ಮಹಾವೀರ್ ಜೈನ್ ಹಾಸ್ಪಿಟಲ್ ವತಿಯಿಂದ ನಾಡಿದ್ದು ದಿನಾಂಕ 10ರ ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ ತಜ್ಞ ವೈದ್ಯರಿಂದ ಉಚಿತ ಆರೋಗ್ಯ ತಪಾಸಣೆಯನ್ನು ಶ್ರೀ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯಲ್ಲಿ ನಡೆಸಲಾಗುವುದು. ತಜ್ಞ ವೈದ್ಯರಾದ ಡಾ. ಅಭಿಮಾನ್ ಎನ್. ಹಾಗೂ ಡಾ. ಯತೀಶ್ ಹೆಚ್.ಎಂ. ಅವರು ಆರೋಗ್ಯ ತಪಾಸಣೆ ನಡೆಸುವರು. ವಿವರಕ್ಕೆ ಸಂಪರ್ಕಿಸಿ : 08192-470872, 9606048421, 96060 48422.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ರೆಹಮಾನ್ ರಸ್ತೆ, ಮಂಡಕ್ಕಿ ಭಟ್ಟಿ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ, ರಿಂಗ್‌ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ಕಾರ್ಲ್ ಮಾರ್ಕ್ಸ್ ನಗರ, ದೇವರಾಜ್ ಕ್ವಾರ್ಟಸ್ (ಬೇತೂರು ರಸ್ತೆ), ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ, ಕೆ.ಆರ್.ರಸ್ತೆ, ಗಡಿಯಾರ ಕಂಬ, ಬಿಟಿ ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂ ಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್‌ಆಫೀಸ್, ರೈಲ್ವೇ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ ಸ್ವಲ್ಪ ಭಾಗ, ವಸಂತ ಟಾಕೀಸ್ ಸ್ವಲ್ಪ ಭಾಗ, ಶ್ರೀರಾಮ ಬಡಾವಣೆ, ಡಿ.ಸಿ. ಎಂ.ಟೌನ್‌ಶಿಪ್, ಶಕ್ತಿನಗರ, ಅಂಬಿಕಾ ನಗರ, ಕೊಟ್ಟೂರೇಶ್ವರ ಬಡಾವಣೆ, ಜಯನಗರ, ಶೇಖರಪ್ಪ ಗೋಡೌನ್ ಬನಶಂಕರಿ ದೇವಸ್ಥಾನ, ರೆಡ್ಡಿ ಬಿಲ್ಡಿಂಗ್ ಹಾಗೂ ಸುತ್ತ ಮುತ್ತ ಪ್ರದೇಶಗಳು. ಪಿ.ಬಿ.ರಸ್ತೆ. ಬಿಲಾಲ್ ಕಾಂಪೌಂಡ್, ಟ್ರಾಫಿಕ್ ಪೊಲೀಸ್ ಠಾಣೆ, ತಾಲ್ಲೂಕು ಆಫೀಸ್, ಫೈರ್ ಆಫೀಸ್, ಎಪಿಎಂಸಿ, ದಿಬ್ಬಳ್ಳಿ ಕಾಂಪೌಂಡ್, ಭಗತ್‌ಸಿಂಗ್ ನಗರ, ಗಣೇಶ ಲೇಔಟ್, ಗೀತಾಂಜಲಿ ಟಾಕೀಸ್, ಈರುಳ್ಳಿ ಮಾರುಕಟ್ಟೆ, ಕೆಎಸ್‌ಆರ್‌ಟಿಸಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.





